# ನೇಸರು

₹ 5/-

## ಮೈಸೂರು ಅಸೋಸಿಯೇಷನ್ ಮುಂಬೈ

PAGES 16
Nesaru **Tingalole** **Vol XXXIII - 9 September 2015**



**ನಾಡಿನ ಹಿರಿಯ ಸಂಶೋಧಕ ಡಾ. ಎಂ. ಎಂ. ಕಲ್ಬುರ್ಗಿಯವರಿಗೆ ಭಾವಪೂರ್ಣ ಶ್ರದ್ಧಾಂಜಲಿ**

**The Mysore Association, Bombay**
393, Bhau Daji Road, Matunga, Mumbai - 400 019.
Tel.: 2402 4647, 2403 7065 • Fax : 2401 0574
Email : mysoreassociation.mumbai@gmail.com

# ಕರ್ನಾಟಕ ಶಾಸ್ತ್ರೀಯ ಸಂಗೀತ ಸ್ಪರ್ಧೆ

ಮೈಸೂರು ಅಸೋಸಿಯೇಷನ್‌ನಲ್ಲಿ ಭಾನುವಾರ ಆಗಸ್ಟ್ 23 ರಂದು ಕರ್ನಾಟಕ ಶಾಸ್ತ್ರೀಯ ಸಂಗೀತದ ಸ್ಪರ್ಧೆ ಏರ್ಪಡಿಸಲಾಗಿತ್ತು. ಸ್ಪರ್ಧೆಗಳನ್ನು ಮೂರು ತಂಡಗಳಲ್ಲಿ ವಿಂಗಡಿಸಲಾಗಿತ್ತು. ಶ್ರೀಮತಿ ಲಕ್ಷ್ಮೀ ಪಾರ್ಥಸಾರಥಿ, ಶ್ರೀಮತಿ ಗೌರಿ ನಟರಾಜನ್ ಮತ್ತು ಡಾ। ಶೇಖರ ತೀರ್ಪುಗಾರರಾಗಿದ್ದರು.





ಸ್ಪರ್ಧೆಯು ಬೆಳಗಿನ 9.45 ಕ್ಕೆ ಆರಂಭವಾಯಿತು. ಶ್ರೀಮತಿ ರಮಾ ವಸಂತ್ ಎಲ್ಲರಿಗೂ ಸ್ವಾಗತ ಕೋರಿದರು. ಶ್ರೀಮತಿ ಶ್ಯಾಮಲಾ ರಾಧೇಶ್ ತೀರ್ಪುಗಾರರ ಪರಿಚಯ ಮಾಡಿಕೊಟ್ಟರು. ಮೊದಲ ತಂಡದ ಸ್ಪರ್ಧಿಗಳು 8–12 ವರ್ಷದೊಳಗಿನವರು. ಆದಿತಾಳದಲ್ಲಿ ಒಂದು ವರ್ಣವನ್ನು ಒಂದನೆಯ ಮತ್ತು ಎರಡನೆಯ ಕಾಲದಲ್ಲಿ ಹಾಡಿ, ಕನ್ನಡ ದಾಸರ ಒಂದು ದೇವರನಾಮವನ್ನೂ ಸಹ ಹಾಡಬೇಕು ಎಂಬ ನಿಯಮವಿತ್ತು. ಇದಕ್ಕೆ ಅವರಿಗೆ 10 ನಿಮಿಷದ ಕಾಲವಕಾಶವನ್ನೂ ಕೊಡಲಾಗಿತ್ತು. ಇದರಲ್ಲಿ ಸುಮಾರು 20 ಮಕ್ಕಳು ಭಾಗವಹಿಸಿದ್ದರು. ಅನಿಕೇತ್ ಅಯ್ಯರ್ (ಮೊದಲ ಸ್ಥಾನ), ವಾಣಿ ಮುಕುಂದನ್ (ಎರಡನೆಯ ಸ್ಥಾನ), ಎಸ್. ಶ್ರೀವತ್ಸನ್ (ಮೂರನೆಯ ಸ್ಥಾನ) ಹಾಗೂ ಸಾಯಿ ವಿಶ್ವರದತ್ತ ಮತ್ತು ಮಹತಿ ರಾಧೇಶ್ (ಸಮಾಧಾನಕರ) ವಿಜಯಿಗಳೆಂದು ಘೋಷಿಸಲಾಯ್ತು. ಬಂದ ಮಕ್ಕಳಿಗೆ ಬಿಸ್ಕತ್ತು ಸಿಹಿಪಾನೀಯ ಹಂಚಲಾಯ್ತು.

ಎರಡನೆಯ ತಂಡದಲ್ಲಿ 13 ರಿಂದ 17 ವರ್ಷದವರು ಭಾಗವಹಿಸಿದ್ದರು. ಅವರಿಗೆ ಒಂದು ಅಟ್ಟತಾಳದಲ್ಲಿ ವರ್ಣ ಒಂದನೆಯ ಮತ್ತು ಎರಡನೆಯ ಕಾಲದಲ್ಲಿ ಹಾಡಿ, ಕನ್ನಡದ ಒಂದು ದೇವರನಾಮ ಅಥವಾ ಕೀರ್ತನೆಯನ್ನು ಹಾಡಬೇಕೆಂದು ನಿಯಮವಿತ್ತು. ಅವರಿಗೆ 20 ನಿಮಿಷಗಳ ಕಾಲಾವಧಿ ಕೊಡಲಾಗಿತ್ತು. ಭೈರವಿ ರಾಗದ ವರ್ಣ ಈ ತಂಡದವರ ಆಯ್ಕೆಯಾಗಿತ್ತು. ಈ ತಂಡದಲ್ಲಿ ಕೇವಲ 5 ಸ್ಪರ್ಧಿಗಳು ಇದ್ದುದರಿಂದ ಮತ್ತು ಅವರ ಹಾಡುಗಾರಿಕೆ ತೀರ್ಪುಗಾರರಿಂದ ಮೆಚ್ಚುಗೆ ಪಡೆಯದೆ ಹೋದುದರಿಂದ ಕೇವಲ ಒಂದೇ ಬಹುಮಾನ ಘೋಷಿಸಲಾಯ್ತು. ಅಕ್ಷತಾ ಶೇಷನ್ ವಿಜಯಿಯಾದ ಸ್ಪರ್ಧಿ.

ಊಟದ ನಂತರ 3.00 ಗಂಟೆಗೆ ಮೂರನೆ ತಂಡದವರಿಂದ ಹಾಡುಗಾರಿಕೆಯಿತ್ತು. ಈ ತಂಡದಲ್ಲಿ 18 ಕ್ಕೆ ಮೇಲ್ಪಟ್ಟವರು ಸ್ಪರ್ಧಿಗಳಾಗಿದ್ದರು. ಇವರು ಯಾವುದಾದರೂ ಒಂದು ರಾಗವನ್ನು ವಿಸ್ತಾರವಾಗಿ ಹಾಡಿ, ಸ್ವರ ಮತ್ತು ನೆರವಲ್‌ನೊಡನೆ ಯಾವುದೇ ಒಂದು ವಾಗ್ಗೇಯಕಾರರ ಕೃತಿಯನ್ನೂ ಹಾಡಬೇಕಿತ್ತು. ಜೊತೆಗೆ ಕನ್ನಡದಲ್ಲಿ ಒಂದು ದೇವರ ನಾಮವನ್ನೂ ಹಾಡಬೇಕು ಎಂಬ ನಿಯಮವಿತ್ತು. ಇವರಿಗೆ 20 ರಿಂದ 25 ನಿಮಿಷಗಳವರೆಗೆ ಕಾಲಾವಕಾಶವೀಯಲಾಗಿತ್ತು. 'ನಾರಾಯಣ ನಿನ್ನ ನಾಮದ ಸ್ಮರಣೆ' ಎಂಬ ದಾಸರ ಪದ ಈ ತಂಡದಲ್ಲಿ ಹೆಚ್ಚು ಕೇಳಿಬಂತು. ಇದ್ದ 5 ಸ್ಪರ್ಧಿಗಳಲ್ಲಿ ಒಬ್ಬರು ಹಾಡಲಿಲ್ಲ. ಉಳಿದ ನಾಲ್ಕು ಹಾಡುಗಾರರಿಂದ ರಾಗಾಲಾಪನೆ ಸಮರ್ಪಕವಾಗಿರಲಿಲ್ಲವೆಂಬ ಕಾರಣಕ್ಕೆ ತೀರ್ಪುಗಾರರು ಎರಡು ಸಮಾಧಾನಕರ ಬಹುಮಾನವನ್ನು ಘೋಷಿಸಿದರು. ರೋಹಿತ್ ಪ್ರಸಾದ್ ಮತ್ತು ವಿಶಾಲಾಕ್ಷಿ ಶಿವರಾಮನ್ ವಿಜಯಿಗಳಾದರು.

ಎಲ್ಲರಿಗೂ ನಂತರ ಕಾಫಿ ಹಂಚಲಾಯ್ತು. ಕಾರ್ಯಕ್ರಮದ ಯಶಸ್ಸು ಶ್ರೀಮತಿ ಶ್ಯಾಮಲಾ ರಾಧೇಶ್ ಅವರಿಗೆ ಸಲ್ಲಬೇಕು. ಅವರು ಎಲ್ಲವನ್ನೂ ಬಹಳ ಸಮರ್ಪಕವಾಗಿ ಆಯೋಜಿಸಿದ್ದರು. ವಿಜಯಿ ಸ್ಪರ್ಧಿಗಳಿಗೆ ಗಣೇಶನ ಹಬ್ಬದ



ಉತ್ಸವದಲ್ಲಿ ಹಾಡಲು ಅವಕಾಶ ಕೊಡುವ ಸಾಧ್ಯತೆಯಿದೆ.

ಸ್ಪರ್ಧೆಯ ವಿಜೇತರ ಹೆಸರುಗಳು ಇಂತಿವೆ:

ಗ್ರೂಪ್ 1 (8 ರಿಂದ 12 ವಯಸ್ಸು):
ಅನಿಕೇತ್ ಐಯ್ಯರ್ – ಮೊದಲನೆಯ ಬಹುಮಾನ
ವಾಣಿ ಮುಕುಂದನ್ – ಎರಡನೆಯ ಬಹುಮಾನ
ಎಸ್. ಶ್ರೀವತ್ಸನ್ – ಮೂರನೆಯ ಬಹುಮಾನ
ಸಾಯಿ ವಿಶ್ವಕ್ ದತ್ತಾ – ಪ್ರೋತ್ಸಾಹಕರ ಬಹುಮಾನ
ಮಹತಿ ರಾಧೇಶ್ – ಪ್ರೋತ್ಸಾಹಕರ ಬಹುಮಾನ

ಗ್ರೂಪ್ 2 (13 ರಿಂದ 17 ವಯಸ್ಸು) :
ಅಕ್ಷತಾ ಸೇಶನ್ – ಮೊದಲನೆಯ ಬಹುಮಾನ

ಗ್ರೂಪ್ 3 (18 ರಿಂದ 39 ವಯಸ್ಸು) :
ರೋಹಿತ್ ಪ್ರಸಾದ್ – ಪ್ರೋತ್ಸಾಹಕರ ಬಹುಮಾನ
ವಿಶಾಲಾಕ್ಷಿ ಶಿವರಾಮನ್ – ಪ್ರೋತ್ಸಾಹಕರ ಬಹುಮಾನ

# ಸುಗಮ ಸಂಗೀತ ಸ್ಪರ್ಧೆ

ಮೈಸೂರು ಅಸೋಸಿಯೇಷನ್‌ನಲ್ಲಿ ಆಗಸ್ಟ್ 30 ರಂದು ಸುಗಮ ಸಂಗೀತದ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವು ಬೆಳಿಗ್ಗೆ 10 ಗಂಟೆಗೆ ಪ್ರಾರಂಭವಾಯಿತು. ಶ್ರೀಮತಿ ಶ್ಯಾಮಲಾ ರಾಧೇಶ್ ಅವರು ಎಲ್ಲರನ್ನೂ ಸ್ವಾಗತಿಸಿದರು. ಶ್ರೀಮತಿ ಗಿರಿಜಾ ಶಾಸ್ತ್ರಿ, ಶ್ರೀಮತಿ ಪ್ರತಿಮಾ ಎಸ್. ರಾವ್,



ಶ್ರೀಮತಿ ಚೇತನ ರಾವ್, ಶ್ರೀಮತಿ ಶೈಲಿನಿ ರಾವ್, ಶ್ರೀಮತಿ ರಾಜೇಶ್ವರಿ ಗೋಪಾಲಕೃಷ್ಣ ಮತ್ತು ಶ್ರೀ ಪದ್ಮನಾಭ ಅವರು ತೀರ್ಪುಗಾರರಾಗಿ ಭಾಗವಹಿಸಿದ್ದರು. ಶ್ರೀಮತಿ ರಮಾ ವಸಂತ್ ಎಲ್ಲರನ್ನೂ ಆಹ್ವಾನಿಸಿ ತೀರ್ಪುಗಾರರ ಪರಿಚಯ ಮಾಡಿದರು. ಅಸೋಸಿಯೇಷನ್ ಅಧ್ಯಕ್ಷೆ ಶ್ರೀಮತಿ ಕಮಲಾರವರು ತೀರ್ಪುಗಾರರಿಗೆ ಪುಷ್ಪಗುಚ್ಛವನ್ನು ನೀಡಿ ಸನ್ಮಾನಿಸಿದ ಮೇಲೆ ದೇವರನಾಮದೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು.

ಶ್ರೀಮತಿ ಶೈಲಿನಿ ರಾವ್, ಶ್ರೀಮತಿ ರಾಜೇಶ್ವರಿ ಗೋಪಾಲಕೃಷ್ಣ ಮತ್ತು ಶ್ರೀ ಪದ್ಮನಾಭ ಅವರು ದೇವರನಾಮದ ಸ್ಪರ್ಧೆಗೆ ತೀರ್ಪುಗಾರರಾಗಿದ್ದರು. 8

*(ಪುಟ 5ಕ್ಕೆ)*

ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇಡರ್**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎನ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065
Fax : 2401 0574
Email :
mysoreassociation.mumbai@gmail.com
Website :
www.mysoreassociation.in

*ಸಂಪಾದಕೀಯ*

# ನೇಸರು

ತಿಂಗಳೋಲೆ

**ಸಂಪುಟ 33** **ಸಪ್ಟೆಂಬರ್ 2015** **ಸಂಚಿಕೆ 9**

# ತೀಕ್ಷ್ಣದೃಷ್ಟಿಯ ಸಂಶೋಧಕರು – ಡಾ. ಎಂ. ಎಂ. ಕಲ್ಬುರ್ಗಿ

ಕನ್ನಡ ಸಂಶೋಧನೆಯ ಕ್ಷೇತ್ರದಲ್ಲಿ ಡಾ. ಎಂ. ಎಂ. ಕಲ್ಬುರ್ಗಿಯವರ ಹೆಸರು ಪ್ರಖ್ಯಾತವಾದುದು. ಗ್ರಂಥ ಸಂಪಾದನೆ, ಶಾಸನಗಳ ಸಂಪಾದನೆ, ಹಸ್ತಪ್ರತಿಗಳ ಸಂಪಾದನೆ, ಕಾವ್ಯಗಳ ಸಂಪಾದನೆಯಲ್ಲಿ ಇವರದು ಎತ್ತಿದ ಕೈ. ವೀರಶೈವ ಸಾಹಿತ್ಯ ಸಂಶೋಧನೆಯ ಕ್ಷೇತ್ರಕ್ಕೆ ಕಲ್ಬುರ್ಗಿಯವರು ನೀಡಿದ ಕಾಣಿಕೆ ಅವಲೋಕನೀಯವಾದುದು. ಕಲ್ಬುರ್ಗಿಯವರು ಮುಖ್ಯವಾಗಿ ಪ್ರಾಚೀನ ಕಾವ್ಯ, ವಚನಗಳು ಹಾಗೂ ವೀರಶೈವ ಸಾಹಿತ್ಯದ ಬಗ್ಗೆ ಸಂಪಾದನೆ ಮಾಡಿದ್ದಾರೆ. ಇವುಗಳಲ್ಲದೆ ಛಂದಸ್ಸಿನ ಬಗ್ಗೆ ಒಲವುಳ್ಳ ಅವರು ಪ್ರಾಚೀನ ಛಂದೋರೂಪಗಳ ಕುರಿತು ಬಹಳಷ್ಟು ಅಧ್ಯಯನವನ್ನು ಮಾಡಿದ್ದಾರೆ.

ಕಲ್ಬುರ್ಗಿಯವರನ್ನು ಮೊತ್ತ ಮೊದಲಾಗಿ ನೋಡಿದ್ದು ಕನ್ನಡ ವಿಭಾಗ ಏರ್ಪಡಿಸಿದ್ದ ಕಾರ್ಯಕ್ರಮವೊಂದರಲ್ಲಿ, ಅನಂತರ ಅವರ ಜೊತೆ ಮಾತನಾಡಿದ್ದು ಧಾರವಾಡದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮವೊಂದರಲ್ಲಿ. ಬಹಳ ಸೌಮ್ಯ ಸ್ವಭಾವದ ವ್ಯಕ್ತಿಯಾಗಿದ್ದ ಅವರು, ಯಾವುದೇ ವಿಷಯದ ಬಗ್ಗೆ ಕೇಳಿದರೂ, ಈಗಷ್ಟೇ ಓದಿದ ಹಾಗೆ ಅದನ್ನು ವಿಸ್ತಾರವಾಗಿ ಹೇಳುತ್ತಿದ್ದರು, ಅವರ ನೆನಪಿನ ಶಕ್ತಿ ಅಗಾಧವಾದುದು. ಅವರಲ್ಲಿ ಚಂಚಲತೆ ಇರಲಿಲ್ಲ. ಕೇಳುಗರಿಗೆ ಪ್ರತಿಯೊಂದು ವಿಷಯವನ್ನು ಗಂಭೀರ ಚಿಂತನೆ ಮಾಡುವಂತೆ ಪ್ರೇರೇಪಿಸುತ್ತಿದ್ದರು. ಅವರಲ್ಲಿ ಒಂದು ರೀತಿಯ ಖಚಿತ ಅಭಿಪ್ರಾಯವಿರುತ್ತಿತ್ತು. ಯಾವುದೇ ವಿಷಯವಿರಲಿ, ಅದನ್ನು ತನ್ನದೇ ಆದ ಸಂಶೋಧನೆಯ ನೆಲೆಯಲ್ಲಿ ಸಂಶೋಧನೆಯನ್ನು ಮಾಡುತ್ತಿದ್ದರು. "ಸಂಶೋಧನೆ ಅಭಿವ್ಯಕ್ತಿಯ ಕ್ರಮ, ಕೆಲವರು ಅದನ್ನು ಒಪ್ಪಬಹುದು, ಕೆಲವರು ಒಪ್ಪದೇ ಇರಬಹುದು. ಸಂಶೋಧನೆ ಅಲ್ಪವಿರಾಮವೇ ಹೊರತು ಪೂರ್ಣ ವಿರಾಮ ಅಲ್ಲ' ಎನ್ನುವ ಮಾತನ್ನು ಕೂಡ ಅವರು ಹೇಳುತ್ತಿದ್ದರು. ಇತರ ಸಾಹಿತಿಗಳ ಪ್ರಭಾವವಲಯದಿಂದ ಹೊರಬಂದು ತಮ್ಮದೇ ಆದ ಭಿನ್ನ ಚಿಂತನೆ, ಆದರ್ಶ, ಅನುಭವ, ಅಭಿವ್ಯಕ್ತಿ ಮಾರ್ಗವನ್ನು ಕಂಡುಕೊಂಡು ಅನನ್ಯತೆಯನ್ನು ಮೆರೆದವರು ಕಲ್ಬುರ್ಗಿಯವರು.

ಕನ್ನಡ ಭಾಷೆ ಹಾಗೂ ಇತಿಹಾಸದ ಬಗ್ಗೆ ಆಳವಾದ ಸಂಶೋಧನೆಯನ್ನು ನಡೆಸಿ ಅಪಾರವಾದ ಜ್ಞಾನವನ್ನು ಹೊಂದಿರುವ ಕಲ್ಬುರ್ಗಿಯವರು ತಮ್ಮ ಬರವಣಿಗೆ ಹಾಗೂ ವೈಚಾರಿಕ ನಿಲುವುಗಳ ಮೂಲಕ ನಾಡಿನ ಸಾಕ್ಷಿಪ್ರಜ್ಞೆಯನ್ನು ಹರಿತಗೊಳಿಸಿದ್ದನ್ನು ನಾವು ಮರೆಯುವಂತಿಲ್ಲ.

ಕಲ್ಬುರ್ಗಿಯವರು ಹುಟ್ಟಿದ್ದು ಬಿಜಾಪುರ ಜಿಲ್ಲೆಯ ಸಿಂಧಗಿ ತಾಲೂಕಿನ ಗುಬ್ಬೆವಾಡದಲ್ಲಿ 1938ರ ನವೆಂಬರ್ 28ರಂದು. ಡಾ. ಆರ್. ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜ ಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ಮಹಾಪ್ರಬಂಧ ಮಂಡಿಸಿ ಡಾಕ್ಟರೇಟ್‌ನ್ನು ಪಡೆದರು. ಸಾಹಿತ್ಯ ಪ್ರಕಾರಗಳಲ್ಲಿ ಸಂಶೋಧನೆ ಇವರ ಆಸಕ್ತಿಯ ಕ್ಷೇತ್ರವಾಗಿತ್ತು. 1962ರಲ್ಲಿ ಅಧ್ಯಾಪಕರಾಗಿ ವೃತ್ತಿ ಆರಂಭಿಸಿ 1966ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇರ್ಪಡೆಯಾದರು. ಕನ್ನಡ ಪೀಠವನ್ನು ಬೆಳೆಸುವುದರ ಜೊತೆಗೆ ತಾವೂ ಬೆಳೆದರು. ಅಧ್ಯಾಪಕರಾಗಿ ಗ್ರಂಥ ಸಂಪಾದನಾ ಶಾಸ್ತ್ರವನ್ನು ಬೋಧಿಸತೊಡಗಿದ ನಂತರ ಸಂಶೋಧನೆಯಲ್ಲಿ ನಿರತರಾದರು. ಕನ್ನಡ ಅಧ್ಯಯನ ಪೀಠದ ಉಪನ್ಯಾಸಕರಾಗಿ, ಪ್ರವಾಚಕರಾಗಿ, ಬಸವ ಪೀಠದ ಪ್ರಾಧ್ಯಾಪಕರಾಗಿ, ಕನ್ನಡ ಪೀಠದ ಮುಖ್ಯಸ್ಥರಾಗಿದಷ್ಟೇ ಅಲ್ಲದೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿಯೂ ಸೇವೆ ಸಲ್ಲಿಸಿದರು. ಇವರ ಮೊದಲ ಸಂಶೋಧನ ಕೃತಿ 'ಬಸವಣ್ಣನವರನ್ನು ಕುರಿತ ಶಾಸನಗಳು'. ಇತರ ಕೃತಿಗಳಾದ ಶಾಸನಗಳಲ್ಲಿ ಶಿವಶರಣರು, ಬಲಿದಾನ, ಸಮಾಧಿ, ವೀರಮರಣ ಇತ್ಯಾದಿ ಇನ್ನೂ ಹಲವಾರು ಗ್ರಂಥಗಳನ್ನು ರಚಿಸಿದ್ದಾರೆ. ಇವರನ್ನು ಅರಸಿಕೊಂಡು ಬಂದ ಪ್ರಶಸ್ತಿ ಪುರಸ್ಕಾರಳಿಗೆ ಲೆಕ್ಕವಿಲ್ಲ. ಅವುಗಳಲ್ಲಿ ಪ್ರಮುಖವಾದವುಗಳು ಪಂಪಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಸೇಡಿಯಾಪು ಕೃಷ್ಣಭಟ್ಟ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನಾಡೋಜ ಪ್ರಶಸ್ತಿ, ನೃಪತುಂಗ ಪ್ರಶಸ್ತಿ ಇತ್ಯಾದಿ.

'ಸಂಶೋಧನೆ' ಎನ್ನುವುದು ಸತ್ಯವನ್ನು ಶೋಧಿಸಲು ಮಾಡಿಕೊಂಡ ಪ್ರತಿಜ್ಞೆ ಎಂಬ ನಂಬಿಕೆಯಿಂದ ಸತ್ಯಾನ್ವೇಷಣೆಯ ದುರ್ಗಮ ಹಾದಿಯಲ್ಲಿ ನಡೆದವರು. ಹಸ್ತಪ್ರತಿಗಳ ಶೋಧಕ್ಕಾಗಿ ಲಂಡನ್, ಆಕ್ಸ್‌ಫರ್ಡ್, ಕೇಂಬ್ರಿಜ್ ವಿಶ್ವವಿದ್ಯಾಲಗಳಿಗೆ ಬೇಟಿ ನೀಡಿದ್ದರು. ಕಲ್ಬುರ್ಗಿಯವರೆಂದರೆ "ಪ್ರತಿಭೆ, ಪರಿಶ್ರಮ, ಪ್ರಾಮಾಣಿಕತೆಗಳ ಸಂಗಮ. ಜೊತೆಗೆ ಸಮರ್ಥ, ನಿರ್ಬೀತ ಮತ್ತು ತೀಕ್ಷ್ಣದೃಷ್ಟಿಯ ಸಂಶೋಧಕರು" ಎಂದು ವಿಮರ್ಶಕರು ಕೊಂಡಾಡಿದ್ದಾರೆ.

ಇಂತಹ ಮಹಾನ್ ಚೇತನ ದುಷ್ಕರ್ಮಿಗಳ ಗುಂಡೇಟಿಗೆ ಬಲಿಯಾಗಿ ನಮ್ಮನ್ನಗಲಿದ್ದಾರೆ. ಅವರ ಹತ್ಯೆಯಿಂದ ಇಡೀ ಕರ್ನಾಟಕವೇ ಬೆಚ್ಚಿಬಿದ್ದಿದೆ. ಈ ಹತ್ಯೆ ಅಭಿವ್ಯಕ್ತಿ ಸ್ವಾತಂತ್ರ್ಯದ ಹತ್ಯೆಯೇ? ಹಾಗೆಯೇ ತಳಸ್ಪರ್ಶಿ ಅಥವಾ ಪ್ರಗತಿಪರ ಚಿಂತನೆಗೆ ಕಡಿವಾಣ ಹಾಕುವ ಪ್ರಯತ್ನವೇ ಎನ್ನುವುದು ಎಲ್ಲರನ್ನು ಕಾಡುತ್ತಿದೆ. ಹತ್ಯೆ ಯಾವ ಕಾರಣಕ್ಕಾಗಿ ನಡೆದಿದೆ ಅನ್ನೋದು ತನಿಖೆಯಿಂದ ಹೊರಬೀಳಬೇಕಾಗಿದೆ. ಆದಷ್ಟು ಬೇಗ ತನಿಖೆಯಾಗಿ, ಸತ್ಯ ಹೊರಬಂದು ಕಲ್ಬುರ್ಗಿಯವರ ಕುಟುಂಬವರ್ಗಕ್ಕೆ ನ್ಯಾಯ ಸಿಗುವಂತಾಗಲಿ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ಮನಸಾ ಹಾರೈಸೋಣ. ಕಲ್ಬುರ್ಗಿಯವರು ಈ ನಾಡಿನ ಶ್ರೇಷ್ಠ ವಿದ್ವಾಂಸಕರಲ್ಲಿ ಒಬ್ಬರು. ಅವರ ಹತ್ಯೆ ಸಹಜವಾಗಿಯೇ ನಾಡಿನ ವೈಚಾರಿಕ ವಲಯದ ಅಕ್ರೋಶಕ್ಕೆ ಕಾರಣವಾಗಿದೆ. ಕಲ್ಬುರ್ಗಿಯವರ ಹತ್ಯೆಗೆ ಕಾರಣ "ಇದೆ ಇರಬಹುದು" ಅಂತ ನೇರವಾಗಿ, ಖಚಿತವಾಗಿ ಮಾಧ್ಯಮಗಳಲ್ಲಿ ದೊಡ್ಡ ದೊಡ್ಡ ಹೇಳಿಕೆಗಳನ್ನು ನೀಡುವುದರ ಬದಲು, ಈ ಹತ್ಯೆಗೆ ನಿಜವಾದ ಕಾರಣವೇನು ಅನ್ನೋದರ ಬಗ್ಗೆ ಪ್ರಾಮಾಣಿಕವಾಗಿ ತೊಡಗಿಸಿಕೊಳ್ಳುವುದೇ ಸ್ವಾಗತಾರ್ಹ ಅನಿಸುತ್ತದೆ.

**– ಡಾ. ಜ್ಯೋತಿ ಸತೀಶ್**

# ಕರ್ನಾಟಕ ಸಂಗೀತ ಕ್ಷೇತ್ರದ ನಾಡ ಕಣ್ಮಣಿಗಳು
## ವಿದ್ವಾನ್ ವೀಣಾ ಶಿವರಾಮಯ್ಯ
## (ವೀಣಾ ವಿದ್ವಾಂಸರು – ವಾಗ್ಗೇಯಕಾರರು)



ವೀಣಾ ಶಿವರಾಮಯ್ಯ ನವರು 1885 ನೇ ಇಸವಿಯಲ್ಲಿ ಸಂಸ್ಕೃತ ಮತ್ತು ಸಂಗೀತದಲ್ಲಿ ಅಪೂರ್ವ ಸಾಧನೆಗೈದಿದ್ದ, ವಾಗ್ಗೇಯಕಾರರೂ ಆಗಿದ್ದ ಮೈಸೂರಿನ ನಿವಾಸಿ ವೀಣಾ ಪದ್ಮನಾಭಯ್ಯನವರ ಸುಪುತ್ರರಾಗಿ ಜನಿಸಿದರು. ಪದ್ಮನಾಭಯ್ಯನವರು ವೀಣೆ ಶಾಮಣ್ಣನವರ ಶಿಷ್ಯಂದಿರು. ತಂದೆಯವರಿಂದಲೇ ಸಂಗೀತ ಪಾಠ. ಬಾಲ್ಯ ಕಳೆದ ತಾರುಣ್ಯಕ್ಕೆ ಕಾಲಿಟ್ಟ ಶಿವರಾಮಯ್ಯನವರು ಗಾಯನ – ವಾದನ ಕಲೆಯಲ್ಲಿ ಪ್ರೌಢತೆಯನ್ನು ಗಳಿಸಿದರು. ಸಂಪೂರ್ಣ ಸಂಸಾರದ ಜವಾಬ್ದಾರಿ ಹೊತ್ತಿದ್ದ ತಂದೆಯವರು ನಿಧನರಾದ ನಂತರ ಅದರ ಸಂಪೂರ್ಣ ಹೊಣೆಗಾರಿಕೆ ಮಗನದಾಯಿತು. ದೈವಕೃಪೆ, ಅರಮನೆಯಲ್ಲಿ ಆಸ್ಥಾನ ವಿದ್ವಾಂಸರಾಗಿ ನೇಮಕಗೊಂಡರು. ಅನೇಕ ಕೌಟುಂಬಿಕ ಅಡಚಣೆಗಳು ಎದುರಾದರೂ ಅವನ್ನೆಲ್ಲ ಎದುರಿಸಿ ಸಂಗೀತ ಸಾಧನೆ ಮುಂದುವರಿಸಿದರು. ಕೆಲಕಾಲ ಕರಿಗಿರಿಯವರಲ್ಲೂ ಮತ್ತು ವಾಸುದೇವಾಚಾರ್ಯರಲ್ಲೂ ಗಾಯನ ಕಲಿತರು. ಅಂದಿನ ದಿನಗಳಲ್ಲಿ ಆತ್ಮೀಯರಾಗಿದ್ದ ವೀಣಾ ಶೇಷಣ್ಣನವರಲ್ಲಿ ವಿದ್ಯಾಭ್ಯಾಸ ಮುಂದುವರಿಸಬೇಕೆಂಬ ಸಲಹೆ ಹಿತೈಷಿಗಳಿಂದ ಬಂದಿತು. ಇಲ್ಲೊಂದು ತೊಡಕಿತ್ತು. ವೀಣಾ ಶೇಷಣ್ಣನವರು ಮತ್ತು ವೀಣೆ ಪದ್ಮನಾಭಯ್ಯನವರಲ್ಲಿ ಹೆಚ್ಚಿನ ಅನ್ಯೋನ್ಯತೆ ಇರಲಿಲ್ಲ. ನೇರವಾಗಿ ಶಿವರಾಮಯ್ಯನವರನ್ನು ಶಿಷ್ಯರನ್ನಾಗಿ ಸ್ವೀಕರಿಸಲು ತಯಾರಿರಲಿಲ್ಲ. ಆದರೆ ಶೇಷಣ್ಣನವರ ವಾದನ ಶೈಲಿಯ ಕೇಳ್ಮೆಯಿಂದಲೇ ಏಕಲವ್ಯನಂತೆ ಸಾಧನೆಗೈದು ಶೇಷಣ್ಣನವರ ಕೃಪೆಗೆ ಪಾತ್ರರಾದರು. ಶೇಷಣ್ಣನವರ ಮತ್ತು ಶಿವರಾಮಯ್ಯನವರ ಸ್ನೇಹ ಸೇತುವೆ ಬೆಸೆದು ಶೇಷಣ್ಣನವರ ಗೈರು ಹಾಜರಿಯಲ್ಲಿ ಪಾಠ ಪ್ರವಚನಗಳನ್ನು ಶಿಷ್ಯರಿಗೆ ನೀಡುವ ಹೊಣೆಗಾರಿಕೆಯನ್ನೂ ಶೇಷಣ್ಣನವರು ಶಿವರಾಮಯ್ಯನವರಿಗೆ ಒಪ್ಪಿಸುವಂತಾಯಿತು.

ಅಪೂರ್ವ ಪ್ರತಿಭೆ ಹೊಂದಿದ್ದ ಶಿವರಾಮಯ್ಯ ನವರ ಸಾಧನೆ ಕೇವಲ ಮೈಸೂರಿಗೆ ಮಾತ್ರ ಸೀಮಿತವಾಗದೆ ದೇಶ ವಿದೇಶಗಳಲ್ಲಿ ಪ್ರಖ್ಯಾತಿಗೆ ಬರುವಂತಾಯಿತು. ಮಹಾರಾಜರ ಆದೇಶದಂತೆ ಹಿಂದೂಸ್ಥಾನೀ ಪದ್ಧತಿ ಮತ್ತು ಪಾಶ್ಚಾತ್ಯ ಪದ್ಧತಿಯ ಸಂಗೀತವನ್ನು ಕಲಿಯುವಂತಾಯಿತು. ಶಾಂತಸ್ವಭಾವದ ಶಿವರಾಮಯ್ಯನವರ ಪಾಲಿಗೆ ಸಂಗೀತವೊಂದೇ ಅಲ್ಲದೆ ಅರಮನೆಯಲ್ಲಿನ ಕೆಲವು ಹೊಣೆಗಾರಿಕೆಯನ್ನೂ ಮಹಾರಾಜರು ಆತ್ಮೀಯವಾಗಿ ಇವರಿಗೆ ವಹಿಸಿದರು. ಅವೆಲ್ಲವನ್ನೂ ದಕ್ಷತೆಯಿಂದ ನಿರ್ವಹಿಸಿದುದೇ ಅಲ್ಲದೆ ಇಂದಿನ ಹೆಸರಾಂತ ವಿದ್ವಾಂಸರಾದ ರಾ.ಸೀತಾರಾಂ, ಬಿ.ಕೆ.ಪದ್ಮನಾಭರಾವ್ ಮುಂತಾದವರಿಗೆ ವಿದ್ಯೆ ನೀಡಿದ ಹೆಗ್ಗಳಿಕೆ ಇವರದು. ಅಂಥ ವಿದ್ಯಾರ್ಥಿಗಳಿಗೆ ವಿದ್ಯೆಯನ್ನು ಧಾರೆಯೆರೆದ ಹೃದಯ ಶ್ರೀಮಂತರು. ಅವರ ಸಂಗೀತ – ಸಾಹಿತ್ಯದ ಸಾಧನೆ ಅವರನ್ನೊಬ್ಬ ಉತ್ತಮ ವಾಗ್ಗೇಯಕಾರರನ್ನಾಗಿಸಿತು.

ಸಂಗೀತ ಸಾಮ್ರಾಜ್ಯದಲ್ಲಿ ಅಪೂರ್ವ ಪ್ರತಿಭೆ ತೋರಿದ ಶಿವರಾಮಯ್ಯನವರು ತಮ್ಮ ಅರವತ್ತೊಂದನೇ ವಯಸ್ಸಿನಲ್ಲಿ ದಿನಾಂಕ 13.03.1946 ರಂದು ತಮ್ಮ ಇಹಲೋಕ ವ್ಯವಹಾರವನ್ನು ಮುಗಿಸಿದರು. ■

## ಡಾ. ವಿಶ್ವನಾಥ ಕಾರ್ನಾಡ್ ಕೃತಿಗೆ ಪ್ರಶಸ್ತಿ



ಕನ್ನಡ ಸಾಹಿತ್ಯ ಪರಿಷತ್ತು 2014ನೇ ಸಾಲಿನಲ್ಲಿ ಪ್ರಕಟವಾದ ಕೃತಿಗಳನ್ನು ಭಾರತೀಸುತ ಸ್ಮಾರಕ ದತ್ತಿ ಪ್ರಶಸ್ತಿ ಬಹುಮಾನ ಸ್ಪರ್ಧೆಗೆ ಪುಸ್ತಕಗಳನ್ನು ಆಹ್ವಾನಿಸಿದ್ದು, ದಿನಾಂಕ 31ನೇ ಜುಲೈ 2015ರಂದು ನಡೆದ ಪುಸ್ತಕಗಳ ಆಯ್ಕೆ ಸಮಿತಿ ಸಭೆಯಲ್ಲಿ ಡಾ. ವಿಶ್ವನಾಥ ಕಾರ್ನಾಡರ 'ಹಿಂತಿರುಗಿ ಬಂದವನು' ಕೃತಿಯು ಆಯ್ಕೆಯಾಗಿರುತ್ತದೆ. ನಗದು ರೂ.5000/- ಹಾಗೂ ಪ್ರಶಸ್ತಿ ಪತ್ರ ಮತ್ತು ಫಲತಾಂಬೂಲ ದೊಂದಿಗೆ ಲೇಖಕರನ್ನು ಗೌರವಿಸಲಾಗುವುದು.

## ಶ್ರದ್ಧಾಂಜಲಿ

ಫೆಬ್ರವರಿ ತಿಂಗಳಿನಲ್ಲಿ ನೇಸರುವಿನಲ್ಲಿ ಪ್ರಕಟವಾದ ಅಸೋಸಿಯೇಷನ್ನಿನ ಸ್ಥಾಪಕ ಸದಸ್ಯರಲ್ಲಿ ಒಬ್ಬರಾದ ಶ್ರೀ.ಬಿ.ವಿ.ಎಸ್ ಅಯ್ಯಂಗಾರ್ ಅವರ ಮಗ ಶ್ರೀ. ರಂಗರಾಜು ಅವರು ಆಗಸ್ಟ್ 2015 ರಂದು ದೀರ್ಘಕಾಲದ ಅನಾರೋಗ್ಯದಿಂದ ಬಳಲಿ ವಿಧಿವಶರಾದರೆಂದು ತಿಳಿಸಲು ವಿಷಾದಿಸುತ್ತೇವೆ. ನೇಸರುವಿನ ಮೂಲಕ ಅವರ ಕುಟುಂಬಕ್ಕೆ ಭಗವಂತನು ಈ ದುಃಖ ಭರಿಸುವ ಶಕ್ತಿಯನ್ನು ನೀಡಲೆಂದು ಪ್ರಾರ್ಥಿಸುತ್ತೇವೆ.

## ಸುಗಮ ಸಂಗೀತ ಸ್ಪರ್ಧೆ

ವರ್ಷದಿಂದ 40 ವರ್ಷಕ್ಕೂ ಮೇಲ್ಪಟ್ಟ ವಯಸ್ಸಿನ ಸ್ಪರ್ಧಿಗಳು ಭಾಗವಹಿಸಿದ್ದರು. ಸ್ಪರ್ಧಿಗಳು ಪುರಂದರದಾಸರು, ವಾದಿರಾಜರು, ಶ್ರೀಪಾದರಾಜರು ವಿರಚಿಸಿದ ಕೃತಿಗಳನ್ನು ಹಾಡಿದರು. ಚಿಕ್ಕ ವಯೋಮಿತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಭಾಗವಹಿಸಿದ್ದರು. ಈ ಭಾಗದ ಕೊನೆಯಲ್ಲಿ ಶ್ರೀಮತಿ ಪದ್ಮ ರವಿಯವರು ವಂದನಾರ್ಪಣೆ ಮಾಡಿದರು. ತೀರ್ಪುಗಾರರು ಕೊನೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿ ಕೆಲವು ಸುಧಾರಣೆಯ ಸಲಹೆಗಳನ್ನು ತಿಳಿಸಿದರು.

ಶ್ರೀಮತಿ ಪ್ರತಿಮಾ ರಾವ್, ಶ್ರೀಮತಿ ಗಿರಿಜಾ ಶಾಸ್ತ್ರಿಯವರು ಮತ್ತು ಶ್ರೀಮತಿ ಚೇತನಾರವರು ಭಾವಗೀತೆ ಮತ್ತು ಜನಪದ ಗೀತೆ ಸ್ಪರ್ಧೆಗೆ ತೀರ್ಪುಗಾರರಾಗಿದ್ದರು. ಅದರಲ್ಲಿ ಎನ್.ಕೆ.ಇ.ಎಸ್. ಶಾಲೆ ವಡಾಲ. ಎಸ್.ಎಂ.ಶೆಟ್ಟಿ ಜ್ಯೂನಿಯರ್ ಕಾಲೇಜ್ ಪೊವಾಯಿ, ವಿದ್ಯಾಪ್ರಸಾರಕ ಮಂಡಲ ಪ್ರೌಢಶಾಲೆ ಮುಲುಂಡ್, ಮಂಜುನಾಥ ವಿದ್ಯಾಲಯ ಜ್ಯೂನಿಯರ್ ಕಾಲೇಜ್ ಡೊಂಬಿವಲಿಯ ಮಕ್ಕಳು ಭಾಗವಹಿಸಿದ್ದು ವಿಶೇಷವಾಗಿತ್ತು. ಕನ್ನಡ ಬಾರದ ಪ್ರತಿಸ್ಪರ್ಧಿಗಳೂ ಕೂಡ ಭಾಗವಹಿಸಿದ್ದರು. ವಯಸ್ಸು 8 ರಿಂದ ಹಿಡಿದು 40 ವರ್ಷದ ವರೆಗಿನ ಎಲ್ಲ ಸ್ಪರ್ಧಿಗಳು ಭಾಗವಹಿಸಿದ್ದರು. ಶೀಮತಿ ಸುಧಾ ಶ್ರೀನಿವಾಸ್‌ರವರು ಕಾರ್ಯಕ್ರಮದ ಈ ಭಾಗವನ್ನು ನಿರೂಪಿಸಿದರು. ತೀರ್ಪುಗಾರರಾಗಿ ಬಂದ ಶ್ರೀಮತಿ ಗಿರಿಜಾ ಶಾಸ್ತ್ರಿಯವರು ಮಕ್ಕಳಿಗೆ ಕನ್ನಡದ ಶಬ್ದಗಳ ಸರಿ ಉಚ್ಚಾರಣೆ, ಕನ್ನಡ ಗೀತೆಗಳು 'ಯೂಟೂಬ್'ನಲ್ಲಿ ಲಭ್ಯವಿರುವ ವಿಷಯ ತಿಳಿಸಿ, ಅದನ್ನು ಕೇಳುತ್ತ ಹೇಗೆ ಲಯಗಾರಿಕೆಯನ್ನು ಸುಧಾರಿಸಿಕೊಳ್ಳಬಹುದೆಂದು ಒಳ್ಳೆಯ ಸಲಹೆ ಕೊಟ್ಟರು. ನಮ್ಮ ಮೈಸೂರು ಅಸೋಸಿಯೇಷನ್ ಅಧ್ಯಕ್ಷೆ ಕಮಲ ಅವರು ಮಕ್ಕಳನ್ನು ಪ್ರೋತ್ಸಾಹಿಸಿ ಮಾತನಾಡಿ, ವಂದನಾರ್ಪಣೆಯಿಂದ ಕಾರ್ಯಕ್ರಮವನ್ನು ಮುಗಿಸಿದರು.

**ಸ್ಪರ್ಧೆಯ ವಿಜೇತರ ಹೆಸರುಗಳು ಇಂತಿವೆ:**

**ದೇವರನಾಮ:**

**ಗ್ರೂಪ್ 1 (8 ರಿಂದ 12 ವಯಸ್ಸು):**
ಎಸ್. ಶ್ರೀವತ್ಸನ್ – ಮೊದಲನೆಯ ಬಹುಮಾನ
ಸಿದ್ಧಾರ್ಥ್ ಮಹೇಂದ್ರ – ಎರಡನೆಯ ಬಹುಮಾನ
ಎಸ್. ಶ್ರೀರಾಮ್ – ಮೂರನೆಯ ಬಹುಮಾನ
ಶ್ರೀನಿಧಿ – ಪ್ರೋತ್ಸಾಹಕರ ಬಹುಮಾನ
ಮಹತಿ ರಾಧೇಶ್ – ಪ್ರೋತ್ಸಾಹಕರ ಬಹುಮಾನ

**ಗ್ರೂಪ್ 2 (13 ರಿಂದ 17 ವಯಸ್ಸು) :**
ಆದಿತ್ಯ ಸಂದೂರ್ – ಮೊದಲನೆಯ ಬಹುಮಾನ
ನಿಧಿ ಗೌಡ – ಎರಡನೆಯ ಬಹುಮಾನ
ನಿಧಿ ನಾಡಗೌಡ – ಪ್ರೋತ್ಸಾಹಕರ ಬಹುಮಾನ

**ಗ್ರೂಪ್ 3 (18 ರಿಂದ 39 ವಯಸ್ಸು) :**
ಸುರಭಿ ಶೇಷಾದ್ರಿ – ಮೊದಲನೆಯ ಬಹುಮಾನ
ಮಾಧುರಿ ಬದ್ರಿನಾಥ – ಎರಡನೆಯ ಬಹುಮಾನ
ಪ್ರತೀಕ್ ರಾವ್ – ಮೂರನೆಯ ಬಹುಮಾನ

**ಗ್ರೂಪ್ 3 (18 ರಿಂದ 39 ವಯಸ್ಸು) :**
ಪಿ.ಎ.ರಾಧಿಕಾ – ಮೊದಲನೆಯ ಬಹುಮಾನ

**ಜಾನಪದ ಗೀತೆ:**

ಗ್ರೂಪ್ 1 (8 ರಿಂದ 12 ವಯಸ್ಸು):
ಎಸ್. ಶ್ರೀವತ್ಸನ್ – ಮೊದಲನೆಯ ಬಹುಮಾನ
ಎಸ್. ಶ್ರೀರಾಮ್ – ಪ್ರೋತ್ಸಾಹಕರ ಬಹುಮಾನ

**ಗ್ರೂಪ್ 2 (13 ರಿಂದ 17 ವಯಸ್ಸು) :**
ಆದಿತ್ಯ ಸಂದೂರ್ – ಮೊದಲನೆಯ ಬಹುಮಾನ
ವರ್ಷ ಗೌಡ – ಎರಡನೆಯ ಬಹುಮಾನ

**ಗ್ರೂಪ್ 3 (18 ರಿಂದ ಮೇಲ್ಪಟ್ಟವರು) :**
ಮಾಧುರಿ ಬದ್ರಿನಾಥ – ಮೊದಲನೆಯ ಬಹುಮಾನ
ವಿಜೇತ ಸುವರ್ಣ – ಪ್ರೋತ್ಸಾಹಕರ ಬಹುಮಾನ

**ಭಾವಗೀತೆ:**

ಗ್ರೂಪ್ 1 (8 ರಿಂದ 12 ವಯಸ್ಸು):
ಎಸ್. ಶ್ರೀವತ್ಸನ್ – ಮೊದಲನೆಯ ಬಹುಮಾನ

ಗ್ರೂಪ್ 2 (13 ರಿಂದ 17 ವಯಸ್ಸು) :
ನಿಧಿ ಗೌಡ – ಮೊದಲನೆಯ ಬಹುಮಾನ
ವರ್ಷ ಗೌಡ – ಪ್ರೋತ್ಸಾಹಕರ ಬಹುಮಾನ

**ಗ್ರೂಪ್ 3 (18 ರಿಂದ ಮೇಲ್ಪಟ್ಟವರು) :**
ಸುರಭಿ ಶೇಷಾದ್ರಿ – ಮೊದಲನೆಯ ಬಹುಮಾನ
ವಿನಾಯಕ ಲಲಿತ್ – ಎರಡನೆಯ ಬಹುಮಾನ
ಸುನಿಲ್ ದೇವಾಡಿಗ – ಪ್ರೋತ್ಸಾಹಕರ ಬಹುಮಾನ

ವರದಿ: ಪದ್ಮ ರವಿ

## ದಿನೇಶ್ ಶೆಟ್ಟಿ ರೆಂಜಾಳ ಅವರಿಗೆ ಡಾಕ್ಟರೇಟ್ ಪದವಿ



ಜನಪ್ರಿಯ ಉದಯವಾಣಿ ಮುಂಬಯಿ ಆವೃತ್ತಿಯ ಹಿರಿಯ ಉಪಸಂಪಾದಕ ದಿನೇಶ್ ಶೆಟ್ಟಿ ರೆಂಜಾಳ ಅವರು ಬರೆದು ಸಲ್ಲಿಸಿದ "ಮುಂಬಯಿ ಕನ್ನಡ ಪತ್ರಿಕೋದ್ಯಮ ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಮಹಾಪ್ರಬಂಧವನ್ನು ಮನ್ನಿಸಿ ಮುಂಬಯಿ ವಿಶ್ವವಿದ್ಯಾಲಯ ಅವರಿಗೆ ಪಿಎಚ್.ಡಿ ಪದವಿ ನೀಡಿ ಗೌರವಿಸಿದೆ. ಡಾ. ದಿನೇಶ್ ಶೆಟ್ಟಿ ಅವರು ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಜಿ. ಎನ್. ಉಪಾಧ್ಯ ಅವರ ಮಾರ್ಗದರ್ಶನದಲ್ಲಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿ ಮುಂಬಯಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದರು.

ಮುಂಬಯಿ ಮಹಾನಗರದಲ್ಲಿ ಕಳೆದ ಒಂದೂವರೆ ಶತಮಾನದಲ್ಲಿ ಕನ್ನಡ ಪತ್ರಿಕೋದ್ಯಮ ಇಟ್ಟ ಹೆಜ್ಜೆ ತೊಟ್ಟ ರೂಪದ ಸಮಗ್ರ ದಾಖಲಾತಿ ವಿಶ್ಲೇಷಣೆ ಈ ಮಹಾಪ್ರಬಂಧದ ಹೆಚ್ಚುಗಾರಿಕೆ. ಮುಂಬಯಿ ಮಹಾನಗರದಲ್ಲಿ ಕನ್ನಡ ಪತ್ರಿಕೋದ್ಯಮ ಬೆಳೆದು ಬಂದ ಬಗೆಯನ್ನು ವಿಭಿನ್ನ ನೆಲೆಯಲ್ಲಿ ಅಧ್ಯಯನ ಮಾಡಿ ಈ ಮಹಾಪ್ರಬಂಧವನ್ನು ರಚಿಸಿರುವುದು ವರ್ತಮಾನದ ತುರ್ತೇ ಆಗಿದೆ. ಮುಂಬಯಿಯಲ್ಲಿ ಪತ್ರಿಕೋದ್ಯಮ ಕನ್ನಡ, ನಾಡು, ನುಡಿ, ಸಾಹಿತ್ಯ, ಸಂಸ್ಕೃತಿಯ ಬಲವರ್ಧನೆಗೆ ಕೊಟ್ಟ ಕೊಡುಗೆಯ ಅವಲೋಕನ ವಿಶ್ಲೇಷಣೆ ಪ್ರಸ್ತುತ ಮಹಾಪ್ರಬಂಧದಲ್ಲಿ ಸೊಗಸಾಗಿ ಅನಾವರಣಗೊಂಡಿದೆ ಎಂದು ಮೌಲ್ಯಮಾಪಕರು ಈ ಮಹಾಪ್ರಬಂಧವನ್ನು ಗುಣಗಾನ ಮಾಡಿದ್ದಾರೆ.

ದಿನೇಶ್ ಶೆಟ್ಟಿ ಅವರು ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪ್ರಥಮ ರ್‍ಯಾಂಕ್ ಹಾಗೂ ವರದರಾಜ ಆದ್ಯ ಚಿನ್ನದ ಪದಕದೊಂದಿಗೆ ಉತ್ತೀರ್ಣರಾದ ಅವರು ಅನಂತರ ಡಾ.ಜಿ.ಎನ್.ಉಪಾಧ್ಯ ಅವರ ಮಾರ್ಗದರ್ಶನದಲ್ಲಿ 'ಬಿ.ಎಸ್.ಕುರ್ಕಾಲರ ಬದುಕು–ಬರಹ' ದ ಕುರಿತಾದ ಅಧ್ಯಯನವನ್ನು ನಡೆಸಿ ಎಂ.ಫಿಲ್ ಪದವಿಯನ್ನು ಪಡೆದಿದ್ದಾರೆ.ಕಳೆದ 7 ವರ್ಷಗಳಿಂದ ಉದಯವಾಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನೇಶ್ ಶೆಟ್ಟಿ ಅವರು ಕೆಲಕಾಲ ಕರ್ನಾಟಕ ಮಲ್ಲ ದೈನಿಕದಲ್ಲಿಯೂ ಕಾರ್ಯನಿರ್ವಹಿಸಿದ್ದಾರೆ. ಉದಯವಾಣಿಯಲ್ಲಿ ಅವರ "ಚಹಾದ ನಡುವೆ ಒಂದಿಷ್ಟು" ಅಂಕಣ ಬರಹ ಜನಮೆಚ್ಚುಗೆಯನ್ನು ಗಳಿಸಿತ್ತು.

ಗಿರಿಕುಂಜರ (ಎಂ.ಫಿಲ್ ಸಂಪ್ರಬಂಧ) ದೀಪದ ಬುಡ ಕತ್ತಲು(ಅಂಕಣ ಬರಹ), ಚಿನ್ನದ ಚೆಂಡು(ಶಿಶುಗೀತೆ) ಅವರ ಪ್ರಕಟಿತ ಕೃತಿಗಳು. ಇವರ ಸಂದರ್ಭೋಚಿತ ಲೇಖನಗಳು ಕಾಲಕಾಲಕ್ಕೆ ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತಿವೆ. ಕಾರ್ಕಳ ಶ್ರೀಭುವನೇಂದ್ರ ಕಾಲೇಜಿನ ಹಳೆವಿದ್ಯಾರ್ಥಿಯಾಗಿರುವ ಅವರು ಮೂಲತಃ ಕಾರ್ಕಳ ರೆಂಜಾಳದ ನಾರಾಯಣ ಶೆಟ್ಟಿ ಹಾಗೂ ಶಾರದಾ. ಎನ್. ಶೆಟ್ಟಿ ದಂಪತಿಯ ಸುಪುತ್ರರಾಗಿದ್ದಾರೆ.

# ‘ಕನ್ನಡದ ಕನ್ನಡಿ’ಯಲ್ಲಿ ಕೆ.ರಘನಾಥ್ ಅವರು ಕಂಡ ಚಿತ್ರಣ

ಕಳೆದ ಇಪ್ಪತ್ತೆಂಟು ವರ್ಷಗಳಿಂದ ಮುಂಬಯಿಯಲ್ಲಿ ಕನ್ನಡದ ಕೈಂಕರ್ಯವನ್ನು ಮಾಡುತ್ತಿರುವ ಡಾ. ಕೆ. ರಘುನಾಥ ಅವರು ಉಪನ್ಯಾಸಕರಾಗಿ, ಅಂಕಣ ಬರಹಗಾರರಾಗಿ ಹೆಸರುವಾಸಿಯಾದವರು. ಝುನ್ ಝುನ್ ಕಾಲೇಜಿನಲ್ಲಿ ಕನ್ನಡ ವಿಭಾಗವನ್ನು ಮುನ್ನಡೆಸುತ್ತಾ ಬರುತ್ತಿರುವ ಅವರು ಮುಂಬಯಿ ಕನ್ನಡಿಗರ ಮೆಚ್ಚುಗೆಗೆ ಪಾತ್ರರಾದವರು.

ಅವರ ಇತ್ತೀಚೆಗೆ ಬಿಡುಗಡೆ ಕಂಡ ಕೃತಿ ‘ಕನ್ನಡದ ಕನ್ನಡಿಯಲ್ಲಿ’ ಒಂದು ಅಪರೂಪದ ಕೃತಿ. ಬೆಂಗಳೂರಿನ ನೆಲಮಲೆ ಪಬ್ಲಿಷಿಂಗ್ ಹೌಸ್ ಇವರು ಈ ಕೃತಿಯನ್ನು ಹೊರತಂದಿದ್ದಾರೆ. ಈ ಕೃತಿಯ ಕುರಿತು ಲೇಖಕರೇ ಹೇಳುವಂತೆ “ಮುಂಬಯಿಯಲ್ಲಿ ಕನ್ನಡ ಶಿಕ್ಷಣ ಸಂಸ್ಥೆಗಳು, ಕನ್ನಡ ಸಂಘಗಳ ಜೊತೆ ಅವಿನಾಭಾವ ಸಂಬಂಧವಿದ್ದು ಉದಯವಾಣಿಯಲ್ಲಿ ಬರೆದ ಅಂಕಣಬರಹಗಳು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ಪ್ರಬಂಧಗಳು ಇದರಲ್ಲಿ ಪ್ರಕಟವಾಗಿವೆ. ಆದ್ದರಿಂದಲೇ ಇದು ಅಮೂಲ್ಯವಾದ ಕೃತಿಯಾಗಿದೆ.

ಕೃತಿಯೊಳಗೆ 29 ಲೇಖನಗಳು ಹಾಗೂ 29 ಅಂಕಣಬರಹಗಳಿವೆ. ಮುಂಬಯಿಯ ಸಾಹಿತ್ಯ ಲೋಕದಲ್ಲಿ ಒಬ್ಬ ಉತ್ತಮ ವಿಮರ್ಶಕರಾಗಿ ಗುರುತಿಸಿಕೊಂಡಿರುವ ರಘುನಾಥ ಅವರು ಹಲವಾರು ಮೌಲಿಕ ಕೃತಿಗಳನ್ನು ವಸ್ತುನಿಷ್ಠ ವಿಮರ್ಶೆಗೆ ಒಳಪಡಿಸಿದ್ದಾರೆ. ಆರಂಭದಲ್ಲಿಯೇ ನವೋದಯ ಸಾಹಿತ್ಯದ ಮೇರು ವ್ಯಕ್ತಿತ್ವದ ರಾಷ್ಟ್ರಕವಿ ಗೋವಿಂದ ಪೈ ಅವರು ಕನ್ನಡ ವಾಙ್ಮಯಕ್ಕೆ ನೀಡಿದ ಕೊಡುಗೆಯನ್ನು ಅವಲೋಕಿಸಿರುವ ಲೇಖಕರು ಜಡ್ಡುಕಟ್ಟಿದ್ದ ವೈದಿಕಧರ್ಮಕ್ಕೆ ಕಾಯಕಲ್ಪವನ್ನು ಒದಗಿಸಿದ ಎರಡು ಖಂಡಕಾವ್ಯಗಳಾದ ‘ಗೋಲ್ಗೋಥಾ ಮತ್ತು ವೈಶಾಖಿ’ಗಳ ಮಹತ್ವವನ್ನು ಬಹಳ ಅರ್ಥಪೂರ್ಣವಾಗಿ ವಿವೇಚಿಸಿದ್ದಾರೆ. ಒಂದು ರೀತಿಯಲ್ಲಿ ಗೋವಿಂದ ಪೈ ಅವರಿಗೆ ಸಂದ ನುಡಿನಮನವೆನ್ನಬಹುದು.

ಎಂ.ಎಂ.ಕಲ್ಬುರ್ಗಿಯವರ ‘ಮಾರ್ಗ’ ಕೃತಿ ಸಮೀಕ್ಷೆ ಮಾಡಿದ ರಘುನಾಥ್ ಅವರು ಆ ಕೃತಿಯಲ್ಲಿ ತಾನು ಕಂಡುಕೊಂಡ ನ್ಯೂನತೆಗಳನ್ನು ವಸ್ತುನಿಷ್ಠವಾಗಿ ವಿಮರ್ಶಿಸಿರುವುದು ಮೆಚ್ಚತಕ್ಕಂತಹ ವಿಷಯ. ಬ್ರಾಹ್ಮಣರು ಬರೆದ ಸಾಹಿತ್ಯವನ್ನು ಬ್ರಾಹ್ಮಣ ಸಾಹಿತ್ಯವೆಂದು ಕರೆಯುವುದಾದರೆ, ಬಸವಣ್ಣ ಬರೆದದ್ದು ಯಾಕೆ ಬ್ರಾಹ್ಮಣ ಸಾಹಿತ್ಯವಾಗಬಾರದು? ಎಂದು ಪ್ರಶ್ನಿಸಿರುವ ಲೇಖಕರು ಕಲ್ಬುರ್ಗಿಯವರ ಸಮೀಕ್ಷೆಗಳಲ್ಲಿನ ವಸ್ತುನಿಷ್ಠತೆ, ಪ್ರಾಮಾಣಿಕತೆ ಮತ್ತು ತತ್ಪರತೆಗಳನ್ನು ಕೂಡಾ ಮೆಚ್ಚಿಕೊಂಡಿದ್ದು ವಿಮರ್ಶಕನ ಒಳನೋಟ ಹೇಗಿರಬೇಕೆನ್ನುವುದಕ್ಕೆ ಇದು ಉತ್ತಮ ನಿದರ್ಶನವಾಗಿದೆ.

ತಾಳ್ತಜೆ ವಸಂತ ಕುಮಾರ್ ಅವರ ಕೃತಿಯ ವಿಹಾರ ಮಾಡಿರುವ ರಘುನಾಥ್ ಅವರು ಅಲ್ಲಲ್ಲಿ ತಂಗುತ್ತಾ ಕಾವ್ಯ ವಿಹಾರ, ಭೌದ್ಧ ವಿಹಾರ, ಶಾಸ್ತ್ರ ವಿಹಾರ, ಜಾನಪದ ವಿಹಾರ, ಚಿಂತನ ವಿಹಾರ, ಸಮಕಾಲೀನ ಸಾಹಿತ್ಯ ವಿಹಾರ ಹೀಗೆ ಒಂದೊಂದೇ ದ್ವಾರಗಳನ್ನು ಪ್ರವೇಶಿಸುತ್ತಾ ಅತ್ಯಂತ ಸೂಕ್ಷವಾಗಿ ಅವಲೋಕಿಸಿರುವುದು ವಿಮರ್ಶಕನ ಸೂಕ್ಷ್ಮ ದೃಷ್ಟಿಕೋನಕ್ಕೆ ಸಾಕ್ಷಿ.

ಕನ್ನಡ ಕಥನ ಕಾವ್ಯಕ್ಕೆ ಹೊಸತನವನ್ನು ತಂದುಕೊಟ್ಟ ಸು.ರಂ.ಎಕ್ಕುಂಡಿ ಅವರ ‘ರೊಟ್ಟಿ ಮತ್ತು ಕೋವಿ’, ‘ಇಬ್ಬರು ರೈತರು’, ‘ ಹಿಟ್ಟು ಮತ್ತು ಮಲ್ಲಿಗೆ’ ಈ ಕವನಗಳ ಒಳಹೊಕ್ಕು ಕವಿತೆಯಲ್ಲಿ ಅಡಗಿರುವ ಸೊಬಗನ್ನು ವರ್ಣಿಸಿದ್ದಾರೆ. ಹಿಟ್ಟು ಮತ್ತು ಮಲ್ಲಿಗೆ ಒಂದು ಹಸಿವಿನ ದ್ಯೋತಕವಾದರೆ ಇನ್ನೊಂದು ಸೌಂದರ್ಯದ ಪ್ರತೀಕ. ಆದರೆ ಲೇಖಕರು ಕವಿಯ ಭಾವ ಅವರು ತಳೆಯುವ ನಿಲುವು ಸಂದಿಗ್ದ ಅರ್ಥಕ್ಕೆ ಕಾರಣವಾಗುತ್ತದೆ ಎಂಬ ಸತ್ಯವನ್ನು ಬರೆಯಲು ಮರೆಯಲಿಲ್ಲ.

ಪು.ತಿ.ನ ಅವರ ಸುಂದರವಾದ ‘ಕೊಳಲು ಮತ್ತು ಬೂಟುಗಾಲಿನ ಸದ್ದು’ ಕವನದಲ್ಲಿ ಶ್ರೀ ಹರಿಚರಿತೆಯ ಗೋಕುಲ ಪ್ರಸ್ಥಾನಕ್ಕೆ ಮುನ್ನಿನ ಒಂದು ಸನ್ನಿವೇಶವನ್ನು ಬಹಳ ಸುಂದರವಾಗಿ ಚಿತ್ರಿಸಿದ್ದಾರೆ. ಇಲ್ಲಿ ಲೇಖಕರು ಈ ಕವಿತೆಯ ಒಳ ಹೊರಗನ್ನು ಆಳವಾಗಿ ಅಧ್ಯಯನ ಮಾಡಿ ಅನೇಕ ಪ್ರಶ್ನೆಗಳನ್ನು ಎಸೆದು ಆ ಕುರಿತು ಓದುಗರು ಚಿಂತಿಸುವಂತೆ ಮಾಡಿದ್ದಾರೆ.



– ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ

ವೀರಪ್ಪ ಮೊಯಿಲಿಯವರ ‘ಶ್ರೀ ರಾಮಾಯಣ ಮಹಾನ್ವೇಷಣಂ’ನ ವೈಶಿಷ್ಟ್ಯತೆಯನ್ನು ಸೀತೆಯ ಪಾತ್ರದ ವೈಶಿಷ್ಯತೆ, ಸ್ವಂತಿಕೆಯನ್ನು ಪಡೆಸಿರುವ ತಾರೆ, ರುಮೆಯರು, ರಾಮಾಭ್ಯುದಯದಲ್ಲಿ ತಮ್ಮ ಅಭ್ಯುದಯವನ್ನು ಕಾಣುವ ದೂರದೃಷ್ಟಿಯ ಊರ್ಮಿಳೆ, ಕಾಮುಕ ಇಂದ್ರನ ಕುಹಕಕ್ಕೆ ಬಲಿಯಾದ ಅಹಲ್ಯೆ, ರಾಮನ ನಿರೀಕ್ಷೆ ಯಲ್ಲಿ ಜೀವನ ಕಳೆದ ಶಬರಿ, ಶೂರ್ಪನಖಿ ಈ ಎಲ್ಲಾ ಸ್ತ್ರೀಪಾತ್ರವನ್ನು ರಘುನಾಥ ಅವರು ಬಹಳ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಈ ಕೃತಿಯಲ್ಲಿ ಬೇಂದ್ರೆಯವರ ಸಮಗ್ರ ಕಾವ್ಯ ದರ್ಶನದ ಚಿಂತನೆಯಿದೆ, ಗಿರೀಶ್ ಕಾರ್ನಾಡರ ಒಡಲ ಮೀಮಾಂಸೆಯನ್ನು ವಿಭಿನ್ನವಾಗಿ ವಿಶ್ಲೇಷಿಸಿರುವ ರೀತಿ ಸೋಜಿಗವನ್ನುಂಟುಮಾಡುತ್ತದೆ. ಕನ್ನಡ ಭಾಷೆಯ ಬಗ್ಗೆ ಆತಂಕವನ್ನು ವ್ಯಕ್ತಪಡಿಸುತ್ತಾ ರಘುನಾಥ್ ಅವರು ಕನ್ನಡವನ್ನು ಅನ್ನದ ಭಾಷೆಯನ್ನಾಗಿ ಮಾಡುವುದರ ಕುರಿತು ಚಿಂತಿಸಿರುವುದು, ‘ಮುಂಬಯಿಯಲ್ಲಿ ಕನ್ನಡದ ಭವಿಷ್ಯ, ‘ಮಹಾರಾಷ್ಟ್ರದಲ್ಲಿ ಕನ್ನಡ ಶಿಕ್ಷಣದ ಸವಾಲುಗಳು’ ಮುಂತಾದ ಲೇಖನಗಳ ಮೂಲಕ ಕನ್ನಡ ಭಾಷೆಯ ಉಳಿವಿಗಾಗಿ ನಾವು ಯಾವ ರೀತಿಯ ಹೋರಾಟ ಮಾಡ ಬಹುದು ಎನ್ನುವುದರ ಕುರಿತು ವಿಶ್ಲೇಷಿಸಿರುವುದು ಅವರ ಕನ್ನಡ ಭಾಷಾ ಪ್ರೇಮಕ್ಕೆ ಸಾಕ್ಷಿ.

ಅಂಕಣ ಬರಹಗಳತ್ತ ಗಮನ ಹರಿಸಿದಾಗ ವಾಸ್ತವ ಜಗತ್ತಿಗೆ ನಿಕಟವಾಗಿರುವ ವಿಷಯಗಳತ್ತ ಕ್ಷ–ಕಿರಣವನ್ನು ಬೀರಿದ್ದಾರೆ. ಪ್ರಸ್ತುತ ವಿದ್ಯಮಾನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅದಕ್ಕೆ ಸೂಕ್ತವಾದ ಕೆಲವು ಸನ್ನಿವೇಶಗಳನ್ನು ನಿದರ್ಶನವಾಗಿ ನೀಡಿ ಬರೆದ ಒಂದೊಂದು ಲೇಖನಗಳೂ ಮೌಲಿಕವಾದುದು. ಅನಾದಿ ಕಾಲದಿಂದಲೂ ನಡೆದು ಬಂದ ಗುರುಶಿಷ್ಯರ ಸಂಬಂಧ, ಶಿಕ್ಷಣ ಕ್ಷೇತ್ರದಲ್ಲಿ ನಡೆಯುವ ವ್ಯಾವಹಾರಿಕ ದೃಷ್ಟಿ ಕೋನಗಳು ಓದುಗನೆದುರು ಬಿಚ್ಚಿಡುವ ಪರಿ ವಿಶಿಷ್ಟವಾದುದು. ನಿಸ್ಸಾರ್ ಅಹಮದ್ ಅವರ ಕವಿತೆಯ ತಿರುಳಿನ ಮೂಲಕ ಪರಿವರ್ತನೆ ಎನ್ನುವುದು ಅಂತರಂಗದಲ್ಲಿ ಆದಾಗ ಬಹಿರಂಗದಲ್ಲಿ ಅದು ತಾನಾಗಿ ಸಂಭವಿಸುತ್ತದೆ. ಅದು ಅವರವರ ಇಚ್ಛೆಯಿಂದ ಆಗಬೇಕೇ ಹೊರತು ಅದನ್ನು ಬಲಾತ್ಕಾರದಿಂದ ತರುವುದು ತರವಲ್ಲ ಎಂದು ಕಾವ್ಯವನ್ನು ಮಾರ್ಮಿಕವಾಗಿ ವರ್ಣಿಸಿದ್ದಾರೆ.

ಡಾ. ರಘುನಾಥ ಅವರು ತುಂಬಾ ಪುಸ್ತಕಗಳನ್ನು ರಚಿಸಿ ಸಂಖ್ಯೆಗಳನ್ನು ಹೆಚ್ಚಿಸುವಲ್ಲಿ ಆಸಕ್ತಿ ತೋರುವವರಲ್ಲ. ಆದರೆ ಅವರ ಈ ಕೃತಿಯಲ್ಲಿನ ಒಂದೊಂದು ಲೇಖನವೂ ಬಹಳ ಅಮೂಲ್ಯವಾಗಿದ್ದು ಓದುಗನನ್ನು ಆಯಾಯ ವಿಷಯಗಳ ಕುರಿತು ಚಿಂತಿಸುವಂತೆ ಮಾಡುತ್ತದೆ. ಈ ಕೃತಿಯಲ್ಲಿ ಡಾ.ರಘುನಾಥ್ ಅವರ ಓದಿನ ಆಳ, ವಿಸ್ತಾರ ಹಾಗೂ ಓದಿದ ವಿಷಯಗಳನ್ನು ಮನನ ಮಾಡಿಕೊಂಡ ರೀತಿ ಗಮನಾರ್ಹವಾದುದು. ವಸ್ತುನಿಷ್ಠ ವಿಮರ್ಶೆಯ ಮೂಲಕ ಅವರು ಓದುಗರ ಗಮನಸೆಳೆಯುತ್ತಾರೆ. ಅವರು ಆರಿಸಿಕೊಂಡ ವಸ್ತು, ಅದನ್ನು ನಿಪುಣತೆಯಿಂದ ಚಿತ್ರಿಸಿದ ರೀತಿ ಅವರ ಬರವಣಿಗೆಯ ಕೌಶಲತೆಗೆ ಸಾಕ್ಷಿ. ಅದರಲ್ಲಿ ವ್ಯಕ್ತಿ ಚಿತ್ರಗಳಿವೆ, ಪುಸ್ತಕ ವಿಮರ್ಶೆಯಿದೆ, ಶೈಕ್ಷಣಿಕ ಚಿಂತನೆಯಿದೆ, ಮಕ್ಕಳ ಕುರಿತಾದ ಕಾಳಜಿಯಿದೆ, ನಮ್ಮ ಆಚಾರ ವಿಚಾರ, ಸಂಸ್ಕೃತಿಯ ಕುರಿತಾದ ಚಿಂತನೆಯಿದೆ.

■

# ಅಂಧಕಾರ ಭಾರತದಲ್ಲಿ ಮೂಡಿಬಂದ ನಕ್ಷತ್ರ - 'ಮಹಾತ್ಮ ಜ್ಯೋತಿಬಾ ಫುಲೆ'

ನಮ್ಮ ದೇಶದಲ್ಲಿ ದಲಿತ ವರ್ಗ ಮತ್ತು ಅಸ್ಪೃಶ್ಯರ ಶಿಕ್ಷಣ ಮತ್ತು ಸಮಾನತೆಗೆ ಹೋರಾಡಿದ ಮಹಾನ್ ವ್ಯಕ್ತಿ 'ಮಹಾತ್ಮಾ ಜ್ಯೋತಿಬಾ ಫುಲೆ' ಎಂಬುದನ್ನು ನಮ್ಮ ದೇಶದ ಚರಿತ್ರೆಯನ್ನು ಅರಿತಿರುವ ಪ್ರತಿಯೊಬ್ಬರಿಗೂ ತಿಳಿದಿರತಕ್ಕ ವಿಚಾರ. ಆದರೆ, ಇಂದಿನ ಈ ನಮ್ಮ ಆಧುನಿಕ ಯುಗದಲ್ಲಿ ನಮ್ಮ ಯುವ ಪೀಳಿಗೆಗೆ ಇವೆಷ್ಟು ತಿಳಿದಿದೆ ಎಂಬುದೇ ಪ್ರಶ್ನೆ. ಈ ಉದ್ದೇಶದಿಂದ ನಾನು ಈ ಲೇಖನವನ್ನು ಬರೆದಿದ್ದೇನೆ.

ನಮ್ಮ ದೇಶದ ಸ್ವಾತಂತ್ರ್ಯ ಪೂರ್ವ ಮತ್ತು ತದನಂತರ ನಡೆದ ನೂರಾರು ಘಟನೆಗಳನ್ನು ಅವಲೋಕಿಸಿದಾಗ ನಮಗೆ ತಿಳಿದು ಬರುವುದೇನೆಂದರೆ ಭಾರತದ ಪ್ರಜೆಗಳಲ್ಲಿ ಕೆಲವರು ಮಾಡಿದ ರಾಜಕೀಯ ಕುತಂತ್ರದಿಂದಾಗಿ ಮತ್ತು ತಮ್ಮ ಸ್ವಾರ್ಥ ಸಾಧನೆಗಾಗಿ ನಮ್ಮ ಇಡೀ ಭಾರತ ದೇಶವನ್ನೇ ಪರಕೀಯರ ವಶಕ್ಕೆ ಕೊಟ್ಟು, ಅವರ ಅಡಿಯಾಳಾಗಿ ಒಂದು ರೀತಿಯಲ್ಲಿ ಅವರ ಗುಲಾಮರಾಗಿ ಸೇವೆ ಮಾಡಿ ಸುಮಾರು 150-160 ವರ್ಷಗಳ ಕಾಲ ನಾವು ಯಾವ ಒಂದು ಸ್ವಾತಂತ್ರ್ಯವಿಲ್ಲದೆ ಕೇವಲ ಬ್ರಿಟಿಷರ ಆಡಳಿತದಲ್ಲಿ ಗುಲಾಮರಾಗಿ ಜೀವನ ಮಾಡಬೇಕಾಗಿ ಬಂದಿರುವುದು ದುರ್ದೈವದ ಸಂಗತಿ. ಆದರೆ, ಈ ಪರಿಸ್ಥಿತಿ ನಿರ್ಮಾಣವಾಗಲು ಕಾರಣಕರ್ತರಾರು ಎಂಬುದನ್ನು ಒಳಹೊಕ್ಕಿ ನೋಡಿದಾಗ ನಮ್ಮಲ್ಲಿರುವ ಕೆಲವು ನಾಯಕರು ಮತ್ತು ಕೆಲವು ತುಂಡರಸರುಗಳು ತಮ್ಮ ವ್ಯಯಕ್ತಿಕ ಸ್ವಾರ್ಥ ಸಾಧನೆಗಾಗಿ ದೇಶದ್ರೋಹಿ ಕೆಲಸ ಮಾಡಿದ್ದೂ ಅಲ್ಲದೆ, ಬ್ರಿಟಿಷರ ಜೊತೆ ಕೈ ಜೋಡಿಸಿ, ಸಂಚು ರೂಪಿಸಿ ಒಬ್ಬ ರಾಜನ ಮೇಲೆ ಇನ್ನೊಬ್ಬರನ್ನು ಎತ್ತಿಕಟ್ಟಿ, ಬ್ರಿಟಿಷರು ಇಡೀ ದೇಶವನ್ನೇ ತಮ್ಮ ವಶಕ್ಕೆ ತೆಗೆದುಕೊಳ್ಳುವಂತೆ ಮಾಡಿದರೆಂಬ ಚರಿತ್ರೆಯನ್ನು ನಾವೆಲ್ಲರೂ ಓದಿದ್ದೇವೆ.

ಉದಾ - ನಮ್ಮ ಕರ್ನಾಟಕ ರಾಜ್ಯವನ್ನೇ ತೆಗೆದುಕೊಳ್ಳಿ. ಅದು ಕಿತ್ತೂರು ರಾಣಿ ಚೆನ್ನಮ್ಮನ ಕತೆಯೇ ಆಗಲಿ, ರಾಣಿ ಅಬ್ಬಕ್ಕನ ಹೋರಾಟವೇ ಆಗಲಿ, ಟಿಪ್ಪು ಸುಲ್ತಾನನ ಕತೆಯೇ ಆಗಲಿ, ಸಂಗೊಳ್ಳಿ ರಾಯಣ್ಣನ ಕತೆಯೇ ಆಗಲಿ... ಇವರೆಲ್ಲ ಬ್ರಿಟಿಷರ ದಬ್ಬಾಳಿಕೆಗೆ ಹೋರಾಟ ಮಾಡಿ ನಮ್ಮ ಚರಿತ್ರೆಯಲ್ಲಿ ನಕ್ಷತ್ರಗಳಾಗಿ ಬೆಳಗಿದವರು. ಕೇವಲ ಒಂದು ವ್ಯಾಪಾರಕ್ಕಾಗಿ ಹಡಗಿನಲ್ಲಿ ಇಂಗ್ಲೆಂಡ್‌ನಿಂದ ತಕ್ಕಡಿ ಹಿಡಿದುಕೊಂಡು ಬಂದು ಇಷ್ಟೊಂದು ಕಾರುಬಾರು ಮಾಡಿ ಕೊನೆಗೆ ನಮ್ಮ ಇಡೀ ದೇಶವನ್ನೇ ತಮ್ಮ ವಶಕ್ಕೆ ತೆಗೆದುಕೊಂಡು East India company ಹೆಸರಿನಲ್ಲಿ 150-160 ವರ್ಷಗಳ ಕಾಲ ಆಡಳಿತ ಮಾಡಿ ನಮ್ಮ ಜನರನ್ನು ಗುಲಾಮರಂತೆ ಮಾಡಿರುವುದು ನಮ್ಮ ದೇಶದ ದುರದೃಷ್ಟವಲ್ಲವೇ..?

ಇಷ್ಟೆಲ್ಲಾ ಆಗಲು ಮತ್ತು ಇಲ್ಲಿ ಶಾಶ್ವತವಾಗಿ ಅವರು ನೆಲಯೂರಲು ಕಾರಣೀಕರ್ತರು ಯಾರು? ಮತ್ತು ಇದಕ್ಕೆಲ್ಲ ಅವಕಾಶ ಕೊಟ್ಟವರ್ಯಾರು? ಎಂಬುದನ್ನು ಒಳಹೊಕ್ಕು ನೋಡಿದಾಗ ನಮಗೆ ಸಿಗುವ ಉತ್ತರ... ನಾವು ಮತ್ತು ನಮ್ಮಲ್ಲಿರುವ ಕೆಲವರ ಸ್ವಾರ್ಥ ಸಾಧನೆಯ ಕುಟಿಲೋಪಾಯ ಹಾಗೆಯೇ ಇಲ್ಲಿರತಕ್ಕ ಜನರ ಬಿಕ್ಕಟ್ಟು. ಅದೇ ರೀತಿ ನಮ್ಮ ದೇಶಕ್ಕೆ ಮುತ್ತಿಗೆ ಹಾಕಿರತಕ್ಕಂತಹ ಮುಸ್ಲಿಂ ರಾಷ್ಟ್ರದ ಘೋರಿ ಮಹಮ್ಮದ್, ಘಜನಿ ಮಹಮ್ಮದ್ ಇವರೆಲ್ಲ ನಮ್ಮ ದೇಶದ ಸಂಪತ್ತನ್ನು ಕೊಳ್ಳೆಹೊಡೆದು ದೋಚಿಕೊಂಡು ಹೋಗಲು ಇಲ್ಲಿಯವರ ಸಹಕಾರವಿಲ್ಲದೆ ಹೇಗೆ ಸಾಧ್ಯವಾಗಿತ್ತು? ಇಲ್ಲಿರತಕ್ಕ ಸಣ್ಣಪುಟ್ಟ ರಾಜರುಗಳು ಮತ್ತು ಸ್ಥಳೀಯ ನಾಯಕರುಗಳೆಲ್ಲಾ ಒಗ್ಗಟ್ಟಾಗಿದ್ದರೆ, ಅವರನ್ನು ಓಡಿಸಲು ಸಾಧ್ಯವಾಗುತ್ತಿರಲಿಲ್ಲವೇ? ಎಂಬ ಪ್ರಶ್ನೆ ನಮ್ಮನ್ನು ಈಗಲೂ ಕಾಡುತ್ತಿದೆ.

ಇಷ್ಟೆಲ್ಲಾ ನಮ್ಮ ದೇಶದಲ್ಲಿ ಆದರೂ, ಇವನ್ನೆಲ್ಲಾ ಸಹಿಸಿಕೊಂಡು ನಮ್ಮ ಜನ ಜೀವನ ನಡೆಸುತ್ತಿದ್ದರೂ, ನಮ್ಮಲ್ಲಿರುವ ಕೆಲವು ಸಾಮಾಜಿಕ ಲೋಪದೋಷಗಳಿಂದ ನಮ್ಮ ಒಗ್ಗಟ್ಟು ಹೆಚ್ಚಾಗುವ ಬದಲು ಬಿಕ್ಕಟ್ಟು ಜಾಸ್ತಿಯಾಗತೊಡಗಿತು. ಉದಾ: ವರ್ಣಾಶ್ರಮ ಧರ್ಮದ ಕಟ್ಟುಪಾಡಿನಿಂದ ಬ್ರಾಹ್ಮಣ, ಕ್ಷತ್ರೀಯ, ವೈಶ್ಯ ಮತ್ತು ಶೂದ್ರ ಎಂಬ ನಾಮಾಂಕಿತದಿಂದ ಸಮಾಜವನ್ನು ವಿಂಗಡಣೆ ಯಾವಾಗ ಮಾಡಿದರೋ, ಅಲ್ಲಿಂದ ಮೇಲ್ಜಾತಿ, ಕೆಳಜಾತಿ ಮೇಲ್ಮಟ್ಟದವರು, ಕೆಳಮಟ್ಟದವರು ಎಂಬ ಭೇದ ಭಾವದ ಕಲ್ಪನೆ ಶುರುವಾಯಿತು. ಯಾರು ಮೇಲ್ಜಾತಿಯಲ್ಲಿದ್ದಾರೆ, ಅವರು ಮೇಲೆ ಮೇಲೆ ಎಲ್ಲಾ ಕ್ಷೇತ್ರಗಳಲ್ಲೂ ಹೋಗುವುದಕ್ಕೆ ಅವಕಾಶವಾಯಿತು. ಆದರೆ, ಕೆಳಮಟ್ಟದಲ್ಲಿರುವವರು ಹಾಗೆಯೇ ಇನ್ನೂ ಕೆಳ ಹಂತಕ್ಕೆ ಹೋಗಲು ಕಾರಣವಾಯಿತು. ಅದು ಆರ್ಥಿಕ ಕ್ಷೇತ್ರವಿರಬಹುದು, ಧಾರ್ಮಿಕವಿರಬಹುದು, ಅಥವಾ ವಿದ್ಯಾಕ್ಷೇತ್ರವಿರಬಹುದು. ಮುಖ್ಯವಾಗಿ ಯಾವಾಗ ವಿದ್ಯಾಕ್ಷೇತ್ರದಲ್ಲಿ ಈ ಕೆಳವರ್ಗದವರಿಗೆ ಎಳ್ಳಷ್ಟೂ ಅವಕಾಶ ಸಿಗದೆ ಅವರು ತಲತಲಾಂತರದಿಂದ ಹಾಗೆಯೇ ಹೀನಾವಸ್ಥೆಯಲ್ಲಿ ಇರಬೇಕಾಗಿ ಬಂತು. ಆದರೆ, ಮೇಲ್ಜಾತಿ ವರ್ಗದವರಿಗೆ ವಿದ್ಯೆ ಪಡೆಯಲು ಯಾವ ಒಂದು ಅಡಚಣೆಯೂ ಇಲ್ಲದೆ ಮುಂದುವರಿಯಲು ಅವಕಾಶವಿತ್ತು.

18ನೇ ಶತಮಾನದಲ್ಲಿ ಈ ಒಂದು ವ್ಯವಸ್ಥೆ ಜಾರಿಯಲ್ಲಿದ್ದುದರಿಂದ, ದಲಿತರಿಗೆ ಮತ್ತು ಹಿಂದುಳಿದ ವರ್ಗದ ಜನರಿಗೆ ಆಗತಕ್ಕ ಅನ್ಯಾಯ ಮತ್ತು ಶೋಷಣೆಯನ್ನು ಅವರ ಪಾಲಿಗೆ ಬಂದ ಪಂಚಾಮೃತವೆಂದು ತಿಳಿದು ಜೀವನ ಮಾಡತಕ್ಕ ಪರಿಸ್ಥಿತಿ ಇತ್ತು. ಸಾಮಾಜಿಕವಾಗಿ, ಧಾರ್ಮಿಕವಾಗಿ ಮತ್ತು ಆರ್ಥಿಕವಾಗಿ ಈ ಎಲ್ಲಾ ದಲಿತ ಜನರನ್ನು ಈ ಮೂಢನಂಬಿಕೆಯ ಕಟ್ಟಾಚಾರಗಳ ಆದೇಶದಿಂದ ಬಂಧಿಸಿ ಸಮಾಜದಲ್ಲಿ ಮೇಲು, ಕೀಳು, ಮತ್ತು ಸವರ್ಣೀಯರು ಮತ್ತು ದಲಿತರು ಎಂಬ ಕಂದಕಗಳನ್ನು ನಿರ್ಮಿಸಿ ಬಹುವರ್ಷಗಳಿಂದ ಮೆರೆಯುತ್ತಿದ್ದ ಮೇಲ್ಜಾತಿಯವರ ಕಾಲ ಅದಾಗಿತ್ತು. ಶೂದ್ರರಿಗೆ ಮತ್ತು ದಲಿತರಿಗೆ ಆಗ ವಿದ್ಯಾಭ್ಯಾಸ ನೀಡುವುದನ್ನೇ ನಿಷೇದಿಸಲಾಗಿತ್ತು.

ಅಂತಹ ಸಂದರ್ಭದಲ್ಲಿ ಈ ಬ್ರಾಹ್ಮಣೇತರ ಸಮಾಜದಿಂದ ಬಂದಂತಹ ಓರ್ವ ಮಹಾನುಭಾವ "ಜ್ಯೋತಿಬಾ ಫುಲೆ" ಎಂಬವರ ಹೋರಾಟ ಪ್ರಾರಂಭವಾಯಿತು ಎಂಬುದನ್ನು ಎಲ್ಲರೂ ತಿಳಿದಿರತಕ್ಕ ವಿಚಾರ. ಆಗಿನ ಕಾಲದಲ್ಲಿ ಆಶ್ಚರ್ಯದ ಸಂಗತಿ ಎಂದರೆ ಈ ಮುಗ್ಧ ಬಾಲಕನನ್ನು ಕೇವಲ ಅವನು ಬ್ರಾಹ್ಮಣೇತರ ಎಂಬ ಕಾರಣಕ್ಕಾಗಿ ಶಾಲೆಯಿಂದ ಹೊರದಬ್ಬುತ್ತಾರೆ. ಆಗಿನ ಕಾಲದಲ್ಲಿ ಶೂದ್ರರು ಶಾಲೆಯಲ್ಲಿ ಇತರ ಮಕ್ಕಳ ಜೊತೆಗೆ ಕೂರುವಂತಿರಲಿಲ್ಲವಂತೆ. ಆಗ ಆ ಬಾಲಕ ತನ್ನ ತಂದೆಯನ್ನು ಕೇಳುತ್ತಾನೆ "ಯಾಕಪ್ಪಾ ನನ್ನನ್ನು ಶಾಲೆಯಿಂದ ಹೊರದಬ್ಬಿದ್ದಾರೆ, ನಾವು ಎಲ್ಲರಂತೆ ಮನುಷ್ಯರಲ್ಲವೇ?" ಅದಕ್ಕೆ ಅವನ ಅಪ್ಪ ಉತ್ತರಿಸುತ್ತಾನೆ.. ಏನೆಂದರೆ "ಮಗೂ, ಈ ಶಾಲೆ, ವಿದ್ಯಾಭ್ಯಾಸ ಎಲ್ಲವೂ ಉಚ್ಛ ವರ್ಣೀಯರಿಗೆ ಮೀಸಲಿಟ್ಟದ್ದು. ಅದು ನಮ್ಮಂಥ ಕೆಳ ಜಾತಿಯವರಿಗೆ ಅಲ್ಲ. ಈ ತರದ ರೀತಿ ನೀತಿ

✍ ಕೃಷ್ಣಪ್ಪ ಕಣ್ವತೀರ್ಥ, ಬೆಂಗಳೂರು

ನಿಯಮಗಳನ್ನು ಮೇಲ್ಜಾತಿ ವರ್ಗದವರು ಕಳೆಜಾತಿಗಳಿಗೆ ಮಾಡಿರುತ್ತಾರೆ. ಇದನ್ನು ಯಾರೂ ಪ್ರಶ್ನೆ ಮಾಡುವಂತಿಲ್ಲ ಅಥವಾ ಅದಕ್ಕೆ ವಿರುದ್ಧವಾಗಿ ನಡೆಯುವ ಹಾಗಿಲ್ಲ" ಎಂದು ಸಮಜಾಯಿಸಿ ತನ್ನ ಮಗನಿಗೆ ತಿಳಿಸುತ್ತಾನೆ.

ತದನಂತರ ಈ ಬಾಲಕನಿಗೆ ಯಾವಾಗಲೂ ಮನಸ್ಸಿನಲ್ಲಿ ಒಂದು ಪ್ರಶ್ನೆ ಕಾಡುತ್ತಾ ಇತ್ತು. ಅದೇನೆಂದರೆ ಈ ಸಮಾಜದಲ್ಲಿ ಉಚ್ಛ ಸಮಾಜದವರು ಯಾರು?, ನಾವು ಆ ಸಮಾಜಕ್ಕೆ ಸೇರಿಲ್ಲವೇ? ಹಾಗಿದ್ದರೆ ನಾವು ಯಾರು? ನಾವು ಭಾರತ ದೇಶದ ಪ್ರಜೆಗಳಲ್ಲವೇ? ಇತ್ಯಾದಿ ಹಲವಾರು ಪ್ರಶ್ನೆಗಳು ಫುಲೆಯವರ ಮನಸ್ಸಿನಲ್ಲಿ ಕಾಡುತ್ತಿತ್ತು. ಆದರೆ, ಆತನ ತಂದೆಗೆ ಅದಕ್ಕೆ ಉತ್ತರ ನೀಡಲು ಶಕ್ತಿಯೂ ಇರಲಿಲ್ಲ. ಮತ್ತು ಧೈರ್ಯವೂ ಇರಲಿಲ್ಲ. ಏಕೆಂದರೆ ಅಂದಿನ ಅಂಧಕಾರ ತುಂಬಿದ ಸಮಾಜದ ರೀತಿ ರಿವಾಜುಗಳಿಗೆ, ಕಟ್ಟು ಕಟ್ಟಲೆಗಳಿಗೆ ಕೆಳಜಾತಿಯವರು ತಲೆಬಾಗಿಸಿ ಪಾಲಿಗೆ ಬಂದಿದ್ದೇ ಪಂಚಾಮೃತ ಎಂದು ನಂಬಿ ಅನುಭವಿಸದೆ ಬೇರೆ ದಾರಿಯೇ ಇರಲಿಲ್ಲ. ಯಾವನಾದರೂ ಇದರ ಬಗ್ಗೆ ಧ್ವನಿ ಎತ್ತಿದರೆ ಅವನ ಮತ್ತು ಅವನ ಕುಟುಂಬದವರನ್ನು ಆ ಊರಿನಿಂದಲೇ ಎತ್ತಂಗಡಿ ಮಾಡುತ್ತಿದ್ದರು. ಇದಕ್ಕೆಲ್ಲಾ ಹೆದರಿ ಕೆಳಜಾತಿಯವರು ಬಂದ ಕಷ್ಟ ಕಾರ್ಪಣ್ಯಗಳನ್ನು ಸಹಿಸಿಕೊಂಡು ಜೀವನ ಮಾಡಬೇಕಾದ ಪರಿಸ್ಥಿತಿ ಇತ್ತು.

ಇವುಗಳನ್ನೆಲ್ಲಾ ಕಂಡು, ಅನುಭವಿಸಿ, ಈ ಅಸಮಾನತೆಯ ವಿರುದ್ಧ ಹೋರಾಡಬೇಕೆಂದು ದೃಢ ನಿರ್ಧಾರ ಮಾಡಿ, ಶೂದ್ರರಿಗೆ ಶಿಕ್ಷಣವೆಂಬುದು

***(ಪುಟ 10ಕ್ಕೆ)***

# ಶ್ರೀಮತಿ ಹೇಮಾವತಿ ಕುವೆಂಪು

ಈ ಕನ್ನಡ ನೆಲದ ಹಲವು ಕನಸುಗಳನ್ನು ಕಂಡ ಮಹಾಕವಿ ಕುವೆಂಪು. ಒಂದು ಮಹಾಪೂರ ಬಂದಂತೆ ಅವರ ಸಾಹಿತ್ಯವಾಹಿನಿ ದಡಗಳನ್ನು ತಿಕ್ಕಿ, ಮಿಕ್ಕಿ ಹರಿದಿದೆ. ಈ ಕವಿಚೇತನಕ್ಕೆ ರಸಸೇವಚನೆಯನ್ನು ಎರೆದ ಹೆಣ್ಣು ಶ್ರೀಮತಿ ಹೇಮಾವತಿ – ಕುವೆಂಪು. ಅವ್ರ ಮನ ಮನೆಯೊಡತಿ ಈ ಹೇಮಾವತಿಯನ್ನು ಕವಿ 'ಪಂಚ ಪ್ರಾಣಲಕ್ಷ್ಮೀ' ಎಂದೇ ಕರೆದಿದ್ದಾರೆ ಆರಾಧಿಸಿದ್ದಾರೆ.

– ಬಾ ಬಾರ ಸಖಿ

ಸಂಸಾರಿಯಾಗಬೇಕೆಂದಿದ್ದ ಕವಿ ಕುವೆಂಪುರವರು ಸಂಸಾರಿಯನು ಸಲಹು ನೀನು! ಆಶೀರ್ವದಿಸು ನಮ್ಮಿರ್ವರೆದೆಗಳೊಂದಾಗುವಂತೆ" ಎಂದು ಗುರುದೇವನನ್ನು ಭಕ್ತಿಯಿಂದ ಪ್ರಾರ್ಥಿಸಿದರು. ಅವರ ಪ್ರಾರ್ಥನೆ ಈಡೇರಿತು. ಸಮಾನ ಹೃದಯಗಳು ಒಂದಾದುವು. "ನಾ ನಿನಗೆ ನೀನೆನಗೆ ಜೇನಾಗುವ".... "ಬಾ ಬಾರ ಸಖಿ" ಎಂದು ದಾಂಪತ್ಯ ಜೀವನಕ್ಕೆ ತಮ್ಮ ಮುದ್ದು ಮಡದಿ ಹೇಮಾವತಿಯನ್ನು ಪ್ರೀತಿಯಿಂದ ಸ್ವಾಗತಿಸಿದರು.

ರಾಷ್ಟ್ರಕವಿ ಕುವೆಂಪುರವರನ್ನು ನಾನು ಕಂಡು "ನಿಮ್ಮ ದಾಂಪತ್ಯ ಜೀವನದಲ್ಲಿ, ಸಾಹಿತ್ಯ ಸೇವೆಯಲ್ಲಿ ನಿಮ್ಮ ಸಹಧರ್ಮಿಣಿಯ ಸಹಾಯವೇನು?" ಎಂದು ಕೇಳಿದಾಗ ಕವಿಗಳು ಮುಗುಳ್ನಗೆ ನಕ್ಕು "ನನ್ನ ಐದು ಪ್ರಣಯಗೀತೆಗಳಲ್ಲಿ ನನ್ನ ಮಡದಿಯ ಬಗ್ಗೆ, ನನ್ನ ಸಂಸಾರದ ಬಗ್ಗೆ ಎಲ್ಲವನ್ನೂ ತಿಳಿಸಿದ್ದೇನೆ. ಅದೇ ನಿಮ್ಮ ಪ್ರಶ್ನೆಗಳಿಗೆ ಸಾಕಷ್ಟು ವಿಷಯಗಳನ್ನು ಒದಗಿಸಿಕೊಡುತ್ತವೆ" ಎಂದು ಹೇಳಿದ್ದಲ್ಲದೆ 'ಜೇನಾಗುವ', 'ಚಂದ್ರಮಂಚಕೆ ಬಾ ಚಕೋರಿ' ಮತ್ತು 'ಅನುತ್ತರಾ' ಈ ಕವನ ಸಂಕಲನಗಳನ್ನು ನನಗೆ ಕೊಟ್ಟು "ವಯಸ್ಸಿಗೆ ಅನುಭವಕ್ಕೆ ತಕ್ಕಂತೆ ಒಂದು ಸಂಕಲನಕ್ಕೂ ಮತ್ತೊಂದು ಸಂಕಲನಕ್ಕೂ ಅಂತರವಿದೆ" ಎಂದು ತಿಳಿಸಿದರು. ತನ್ನ ಸಂಸಾರದ ಬಗೆಗೆ, ಮಡದಿ ಹಾಗೂ ಮಕ್ಕಳ ಬಗೆಗೆ ಇಷ್ಟು ವಿವರವಾಗಿ ಇಷ್ಟೊಂದು ಕವನಗಳನ್ನು ಬರೆದಿರುವ ಕವಿ ಕುವೆಂಪು ಅಲ್ಲದೆ ಮತ್ತಾವ ಕವಿಯೂ ಸಿಗಲಾರ! ದಾಂಪತ್ಯ ಜಿವನದ ಸಾಂಸಾರಿಕ ವಿಷಯಗಳ ಎಲ್ಲ ಅನುಭವಗಳು ಅತ್ಯಂತ ಮಧುರವಾಗಿ, ಕೋಮಲವಾಗಿ, ಹಿತಮಿತವಾಗಿ, ಸುಂದರವಾಗಿ ಒಂದೊಂದು ಕವನದಲ್ಲೂ ಒಡಮೂಡಿ ನಿಂತಿವೆ.

ಹೇಮಾವತಿಯವರು ಬಳಿಯಲಿ ಇಲ್ಲದ ಕವಿಗೆ "ನೀನು ಬಳಿಯಿಲ್ಲದಿರೆ, ಓ ನಲ್ಲೆ ಹೇಮಾಕ್ಷಿ ಜಗವೆಲ್ಲ ಜಡಬಂಡೆ, ಬೇಸರದ ಬೀಡು!" ಎನ್ನಿಸಿದೆ. ಈ ವಿರಹದ ಜೊತೆಯಲ್ಲಿಯೇ ಅವರ ಪತ್ನಿ ಪ್ರೇಮದ ಆಳದ ಅರಿವೂ ನಮಗಾಗುತ್ತದೆ.

"ಹೇಮಾಂಗಿನಿ, – ಪ್ರೇಮಸತಿ
ಮಮಜೀವನ ಮಧುರತಿ
ಬಾರೆ, ನೀರೆ ಕಲಾವಿಪಿನ
 ಕೌಮ್ಯರಂಗದಿ
ಒಲಿವ, ಉಲಿವ, ನಲಿವ,
ಬರಲಿ ವಿಸ್ಮೃತಿಯಂ ರಸಮೃತಿ
ತೇಲಾಡಲಿ ತ್ರೈಭುವನಂ
ರಸತರಂಗದಿ"

ಒಂದು ಕ್ಷಣ ಹೇಮಾವತಿ ಕಣ್ಮರೆಯಾದರೆ ಕವಿಯ ಹೃದಯ ಅವರ ಸಾಕ್ಷಾತ್ಕಾರಕ್ಕಾಗಿ ಮೊರೆಯಿಡುತ್ತದೆ. ಕುವೆಂಪುರವರಿಗೆ ತಮ್ಮ ಪತ್ನಿಯನ್ನು ಎಂಥ ಮೃದುತಮ ಹೆಸರಿನಿಂದ ಉಸರಿಸಿದರೂ ತೃಪ್ತಿಯಾಗದು. ರಾಷ್ಟ್ರಕವಿ ಕುವೆಂಪುರವರ ಶಬ್ದಭಂಡಾರವು ಒಮ್ಮೊಮ್ಮೆ ಶ್ರೀಮತಿಯವರನ್ನು ವರ್ಣಿಸಲು ಅಸಾಧ್ಯವಾಗುತ್ತದೆ ಎಂದರೆ ಅವರ ಪಾತ್ರದ ಹಿರಿಮೆ, ಘನತೆ ನಮಗೆ ಅರಿವಾಗದೆ ಇರದು.

ಹೇಮಲತೆಯೇ ಎಲ್ಲ

ಶ್ರೀಮತಿಯವರ ನಡೆ, ನುಡಿಯಿಂದ ಕವಿ ಕುವೆಂಪುರವರನ್ನು ಜನ ತೂಕ ಮಾಡಿ ಅಳೆಯುತ್ತಾರಂತೆ ಎಂದ ಮೇಳೆ ಶ್ರೀಮತಿಯವರ ವ್ಯಕ್ತಿತ್ವ ಕವಿಯ ಮೇಲೆ ಬೀರಿರುವ ಪ್ರಭಾವ ಪರಿಚಯವಾಗುತ್ತದೆ.

ಕವಿ ಕುವೆಂಪುರರವರ,
 ರವಿಯುದಯಕೆ, ಶಶಿಯುದಯಕೆ
ಹೂದಿಂಗಳುದಯಕೆ,
 ಕೃತಿಯ ಮಧುರ ಸದುದಯಕೆ
ಹೇಮಲತೆಯೇ ಹೃದಯವಂತೆ!
 ಕಲೆ, ಕೀರ್ತಿ, ಸಿರಿ
ಯೆಲ್ಲವೂ ಹೇಮಲತೆ ಇಲ್ಲದಿಲ್ಲ,
 ಹೇಮಲತೆಯೇ ಎಲ್ಲ

ಕವಿಯ ಎಲ್ಲ ಅನುಭವಕ್ಕೂ ಆ ಅನುಭವಗಳ ಅವಿರ್ಭಾವಕ್ಕೂ ಚೈತನ್ಯ ಶಕ್ತಿಯಂತಿದ್ದಾರೆ ಹೇಮಲತೆಯವರು. ಕವಿಯ ಹೃದಯ, ವಿರಹವ್ಯಥೆಯನ್ನು ತಡೆಯಲಾರದೆ ಹೀಗೆ ಮೊರೆಯಿಟ್ಟಿದೆ:

"ಹೇಮಲತೆ, ಪ್ರೇಮಲಕ್ಷ್ಮೀ,
ನನ್ನ ಪಂಚಪ್ರಾಣ ಲಕ್ಷ್ಮೀ
ಗಾಳಿ ನೀನೆ, ಬೆಳಕು ನೀನೆ
ಉಲ್ಲಾಸದ ಉಸಿರು ನೀನೆ
ನನಗೆ ಮನೆಗೆ ಎಲ್ಲ ನೀನೆ!
ನೀನೆ ಕವಿಗೆ ಹೃದಯಭಾವ
ಮೇಣಾತ್ಮಕ್ಕೆ ರಸ ಜೀವ
ಗೃಹಿಣಿ, ನೀನೆ ಗೃಹದ ದೇವಿ:
ನೀನು ದೂರಹೋದರೆ
ಮನಸ್ಸಿದೊಂದು ಹಾಳುಭಾವಿ
ಗೃಹವಿದು "ಮನೆ" ಎಂಬರೆ?
ತಪ್ಪಲು ಗೃಹಲಕ್ಷ್ಮಿಯ ಜೊತೆ
ಒಪ್ಪಿದ ಮನೆಯ ವಿರಹ ಚಿತೆ"

ಕವಿಗೆ ಅಂದವಾದುದೆಲ್ಲ, ಪ್ರಿಯವಾಗಿದ್ದುದೆಲ್ಲಾ ಪ್ರಿಯತಮೆಯ ವಿರಹದಿಂದ ಅಸಹ್ಯವಾಗಿದೆ, ನೋವು ಆಳವಾಗಿದೆ. ಕುವೆಂಪುರವರಿಗೆ ಸರ್ವಸ್ವವೂ ಪತ್ನಿಯಲ್ಲಿ ಮನೆಮಾಡಿಕೊಂಡಿದೆ. ಆಕೆ ಸರ್ವಸ್ವರೂಪಿಣಿಯಾಗಿ, ಮಂಗಳಪ್ರದೆಯಾಗಿದ್ದಾರೆ.

ಸತಿಯನ್ನು ಎಲ್ಲ ಪುರುಷರು ಹೊಗಳುವಂತೆ ಹೊಗಳಿಲ್ಲವಂತೆ! ಸತಿ ಎನ್ನುವ ಮಮತೆಯಲ್ಲಿ ನುಡಿಸಿಲ್ಲ, ಪತಿಯ ಮೋಹದ ಅತಿಶಯೋಕ್ತಿ ಅಲ್ಲ, ಕವಿಯ ಅನುಭವದ ಮಾತು, "ನೀ ದೇವತಾ ಶಕ್ತಿ".

ಕಣ್ಣೂ ಕೋರೈಸುವ ಮಿಂಚಿನಂತಿಲ್ಲ; ಧ್ರುವತಾರೆಯಂತೆ! "ನೀ ಸ್ವಾರ್ಥ ಹೇಮಾ ಸತಿಯೆ, ನೀನೆ ದೇವತೆಯೆನಗೆ!" ಎಂದು ಪತ್ನಿಯನ್ನು ದೇವತೆಯನ್ನಾಗಿ ಕಂಡಿದ್ದಾರೆ.

ವಕ್ಷದ ವಾತ್ಸಲ್ಯ

ಕುವೆಂಪುರವರಿಗೆ ದಾಂಪತ್ಯ ಎನ್ನುವುದು ಕೇವಲ ಗಂಡು, ಹೆಣ್ಣು ಕೂಡಿ ನಡೆಸುವ ಜೀವನಮಾತ್ರ ಎಂದು ತೋರದೆ, ಅದೊಂದು ಅರ್ಥಗರ್ಭಿತವಾದ ಮಹಾತತ್ವವೆಂದು ಕಂಡಿದೆ ಮತ್ತು ಅವರು ಕೈಹಿಡಿದ ಮಡದಿ ಅವರ ಪಾಲಿಗೆ ಕೇವಲ ಮಡದಿ ಮಾತ್ರವಾಗಿರದೆ,

"ಪ್ರೇಯಸಿ? ಸಹಧರ್ಮಿಣೀ? ಹೆಂಡತಿ, ತಾಯಿ?"

ಲೌಕಿಕ ಸಂಬಂಧಕೆ ಬಾಯಿ ತೊದಲಿತಂತೆ!

ಆಕೆ ಶ್ರೀ ಜಗನ್ಮಾತೆಯ ವಕ್ಷದ ವಾತ್ಸಲ್ಯವಂತೆ! ಕವಿಗಳಿಗೆ ಮಕ್ಕಳಲ್ಲಿ ಇರುವ ಮಮತೆ ತಾಯಿಯ ಹೃದಯದಂತೆ ವಾತ್ಸಲ್ಯ ತುಂಬಿ ಹರಿದಿದೆ. ತೇಜಸ್ವಿ ತನ್ನ ತಾಯಿಯ ಗರ್ಭವನ್ನು ಪ್ರವೇಶಿಸಿದಂದಿನಿಂದಲೂ ಕವಿ ಕುವೆಂಪು ಅವರಿಗೆ ಎಲ್ಲಿಲ್ಲದ ಸಡಗರ. ತನುಜಾತ ಆತ್ಮಜಾತನಾಗಿದ್ದಾನೆ ಅವರಿಗೆ! ಮಗುವಿನೊಡನೆ ಮಗುವಾಗಿ ಕುಣಿದಿದ್ದಾರೆ, ಕುಪ್ಪಳಿಸಿದ್ದಾರೆ. ಮನೆಯಲ್ಲಿ ಮಗು ಚೆಲ್ಲಿದ ಧೂಳು

ರಂಗೋಲಿ ಆಗಿತ್ತು. ಹರಡುತ್ತಿದ್ದ ಕಸ ಆಗಿತ್ತು ಜೀವರಸ! ಮಗುವಿಲ್ಲದ ಮನೆಯ ನೈರ್ಮಲ್ಯವೇ ಕವಿಗೆ ಅಸಹ್ಯವಾಯಿತು. ಇಂಥ ಮಕ್ಕಳನ್ನು ಹದೆದುಕೊಟ್ಟ ಹೇಮಾವತಿ "ಕವಿಯ ಜೀವನಕ್ಕೆ ಜೀವನಾ, ಸಂಜೀವನಾ" ಆಕೆಯಿಂದಲೇ ಕವಿ ಕುವೆಂಪುರವರಿಗೆ ಮೋಕ್ಷ.

"ನಾ. . . ನು, ನಾ. . . ನು, ನಾ. . . .ನು ಹೇ. . .ಮೀ. . .ಗಂ. . .ಡ" ಎಂದು ಹೇಳಿದಾಗ ಕವಿಗೆ ಸಗ್ಗದ ಬಾಗಿಲು ತೆಗೆಯಿತಂತೆ. ವೈಸ್ ಛಾನ್ಸಲರ್, ರಾಷ್ಟ್ರಕವಿ, ಕುವೆಂಪು ಅವರಿಗೆ ಧರ್ಮಪತ್ನಿ ಹೇಮಲತೆಯ ಶಿಫಾರಸ್ಸಿನಿಂದ ಸಗ್ಗದಲ್ಲಿ ಪ್ರವೇಶ ಸಿಕ್ಕಿತೆಂಬ ಕವಿಕಲ್ಪನೆ ಅವರ ಪವಿತ್ರ ಪ್ರೀತಿಯ ದ್ಯೋತಕ. ಹೀಗೆ ಕವಿಯ ಜೀವನದ ನಾಡಿನಾಡಿಯಲ್ಲಿ ಜೀವಂತಶಕ್ತಿಯಂತೆ ಹರಿದು ಚೈತನ್ಯ ತುಂಬಿದ್ದಾರೆ ಶ್ರೀಮತಿ ಹೇಮಾವತಿ.

**ದೇವಂಗಿಯ ಕನ್ಯೆ**

ರಾಷ್ಟ್ರಕವಿಗೆ ಸ್ಫೂರ್ತಿದಾಯಿನಿಯಾಗಿ, ಮೋಕ್ಷಪ್ರದಾಯಿನಿಯಾಗಿ ಚೈತನ್ಯಶಕ್ತಿಯಾಗಿ ಇರುವ ಹೇಮಾವತಿಯವರು, ದೇವಂಗಿ ರಾಮಣ್ಣ ಹಾಗೂ ಸೀತಮ್ಮನವರ ಪುತ್ರಿ. ರಾಮಣ್ಣನ್ವರು ಕ್ರಾಂತಿಪುರುಷರು, ದಯಾಳುಗಳು. ದೇವಂಗಿ ಸಣ್ಣಹಳ್ಳಿಯಾಗಿದ್ದು ಅಂದಿನ ದಿನದಲ್ಲಿ ಅವರಿಗೆ ಆಸ್ಪತ್ರೆಯ ಸೌಕರ್ಯವಾಗಲೀ, ಓದುವ ಆಸೆಯಿರುವ ಮಕ್ಕಳಿಗೆ ಶಾಲೆಯ ಅನುಕೂಲವಾಗಲೀ ಇರಲಿಲ್ಲ. ಅಂಥ ಸಮಯದಲ್ಲಿ ಕ್ರಿಶ್ಚಿಯನ್ ಫಾದರ್‌ಗಳ ಸಹಾಯದಿಂದ ಆ ಹಳ್ಳಿಯಲ್ಲಿ ಅಸ್ಪತ್ರೆ, ಶಾಲೆಗಳನ್ನು ಮೊಟ್ಟಮೊದಲಿಗೆ ತೆಗೆಸಿ, ಪ್ರಾರಂಭಿಸಿದ ಕೀರ್ತಿ ರಾಮಣ್ಣನವರದು. ದೇವಂಗಿ ಮನೆತನದ ಹೆಣ್ಣುಮಕ್ಕಳು ಸುಸಂಸ್ಕೃತ ಹೆಣ್ಣುಮಕ್ಕಳು. ನಯ, ವಿನಯ, ಸೌಜನ್ಯ, ರೂಪು, ಗುಣ ಎಲ್ಲದರಲ್ಲಿಯೂ! ಇಂಥ ಹೆಣ್ಣುಮಕ್ಕಳಿಗೆ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ರಾಮಣ್ಣನವರು ಒದಗಿಸಿಕೊಟ್ಟರು. ಹೆಣ್ಣು ಮಕ್ಕಳಿಗೂ ಆತ್ಮವಿದೆ, ವ್ಯಕ್ತಿತ್ವವಿದೆ, ಅವರೂ ವಿದ್ಯಾವಂತರಾಗಬೇಕು, ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕೆಂದು ಯೋಚಿಸಿ, ಅದನ್ನು ಕಾರ್ಯರೂಪಕ್ಕೆ ತಂದವರು ರಾಮಣ್ಣನ್ವರು. ಬಾಲ ವಿಧವೆಯಾದ ತಮ್ಮ ತಮ್ಮನ ಮಗಳನ್ನು ಮೈಸೂರಿನಲ್ಲಿದ್ದ widow's home ನಲ್ಲಿ ಇರಿಸಿ, ಓದನ್ನು ಕಲಿಸಿದ ದೊಡ್ಡಪ್ಪ ಇವರು. "ದೇವಂಗಿ ಹೆಣ್ಣು ಮಕ್ಕಳು ಹೀಗೆ ಅವರದು ಓದುವುದುಂಟೆ? ಅದರಲ್ಲಿಯೂ ವಿಧವೆ?" ಎಂದು ಪ್ರಶ್ನೆ ಕೇಳಿದವರುಂಟು. ಆದರೆ ಅಂಥ ಪ್ರಶ್ನೆಗಳಿಗೆ ಜಗ್ಗುವ ಹೃದಯವಲ್ಲ ರಾಮಣ್ಣನವರದು ಮತ್ತು ಅವರು ಎಂದೂ ಹಳೆಯ ಸಂಪ್ರದಾಯಗಳನ್ನೂ ಮೂಢನಂಬಿಕೆಗಳನ್ನೂ ಸ್ವಲ್ಪವೂ ನಂಬಿದವರಲ್ಲ. ಮಲೆನಾಡಿನ ಜನರಿಗೆ ದೆವ್ವಗಳಲ್ಲಿ ಬಲುನಂಬಿಕೆ. ರಾಮಣ್ಣನವರು ಪ್ರಾಯಕ್ಕೆ ಬರುತ್ತಿದ್ದಂತೆ ಆ ಜನರ ಅಮೂಢನಂಬಿಕೆಗಳೆಲ್ಲಾ ಕೊಚ್ಚಿಹೋಗುವಂತೆ ಮಾಡಿದರು. ಇಂತ ವೀರ ತಂದೆಯ ಮಗಳು ಹೇಮಾವತಿ ಹದಿನಾಲ್ಕು ಜನ ಒಡಹುಟ್ಟಿದವರೊಡನೆ ಅವಿಭಕ್ತ ಕುಟುಂಬದಲ್ಲಿ ಹುಟ್ಟಿ ಬೆಳೆದ ಹೆಣ್ಣೂಮಗಳು ಅವರು. ಹೇಮಾವತಿಯವರು ಹುಟ್ಟಿದಾಗ ಕುವೆಂಪು ಅವರೇ ಆ ಮಗುವಿಗೆ ಹೇಮಾವತಿ ಎನ್ನುವ ಹೆಸರನ್ನು ಇಡಲು ಸೂಚಿಸಿದರಂತೆ. ರಾಮಣ್ಣನವರ ತಂಗಿಯನ್ನು ಕುವೆಂಪುರವರ ಚಿಕ್ಕಪ್ಪನವರಿಗೆ ಕೊಟ್ಟರಂತೆ. ಅವರ ತಂಗಿಯನ್ನು ರಾಮಣ್ಣನವರು ಮದುವೆ ಆಗಿದ್ದರಂತೆ. ಹೀಗಾಗಿ ಹೇಮಾವತಿ, ಕುವೆಂಪುರವರಿಗೆ ಸೋದರಿಕೆಯ ಸಂಬಂಧವಿದ್ದು, ಹೇಮಾವತಿಯನ್ನು ಹುಟ್ಟಿದಂದಿನಿಂದ ನೋಡಿ ಆಡಿಸಿ ಎತ್ತಿಕೊಂಡು ಮುದ್ದಾಡಿದ್ದರು ಇನ್ನೂ ಬಾಲಕನಾಗಿದ್ದ ಕುವೆಂಪು.

**ಸಂಗೀತದಲ್ಲಿ ಅಭಿರುಚಿ**

ಶ್ರೀಮತಿ ಹೇಮಾವತಿಯವರ ವಿದ್ಯಾಭ್ಯಾಸ ಚಿಕ್ಕಂದಿನಲ್ಲಿ ಶಿವಮೊಗ್ಗದಲ್ಲಿ ನಡೆಯಿತು. ಜೊತೆಗೆ ಸಂಗೀತಪಾಠ, ವೀಣೆ ಪಿಟೀಲುಗಳ ಅಭ್ಯಾಸವು ಸಾಗಿತು. ಸಂಗೀತಪಾಠದಲ್ಲಿ ಶ್ರೀಮತಿಯವರಿಗೆ ಸೀನಿಯರ್ ಆಗಿದೆ. ಸುಮಧುರ ಕಂಠದ ಜೊತೆಗೆ ಇವರ ಹೆಚ್ಚು ಆಸಕ್ತಿ. ಅಭಿರುಚಿಯು ಸೇರಿ ಸಂಗೀತ ಸುಲಭವಾಗಿ ಶ್ರೀಮತಿಯವರ ಕೈಸೇರಿತು. ಕುಶಲ ಕಲೆಗಳು ಶ್ರೀಮತಿಯವರಲ್ಲಿ ಮನೆಮಾಡಿಕೊಂಡಿವೆ. ಯಾವುದು ಚೆನ್ನ ಎನಿಸಿದರೆ ತಕ್ಷಣ ಅದನ್ನು ಕಲಿತು ಮನೆಯಲ್ಲಿ ಅಳವಡಿಸಿ ಸಿಂಗರಿಸುತ್ತಾರೆ. ಆ ಗುಣ ಶ್ರೀಮತಿ ಹೇಮಾವತಿಯವರಿಗೆ ಅವರ ತಾಯಿ ಹಾಗೂ ಅಕ್ಕ ತಂಗಿಯರಿಂದ ಉಂಟಾಗಿದೆ. ಇಂದಿಗೂ ಮನೆಯನ್ನು ನವೀನ ರೀತಿಯಿಂದ ಸಿಂಗರಿಸುವ ಹೇಮಾವತಿಯವರ ಜಾಣ್ಮೆ ಅದರ್ಶದ ಮನೆಗೆ ಮಾದರಿಯಾಗಿದೆ.

**ವಿವಾಹ**

ಹೇಮಾವತಿಯವರಿಗೆ ಹದಿನಾರು ವರುಷಗಳಲ್ಲಿ ಮದುವೆ ಆಯಿತು. ಒಂದೇ ದಿವಸದ ಮದುವೆ. ಏಳು, ಎಂಟು ದಿವಸಗಳ ಸಂಪ್ರದಾಯದ ಮದುವೆಯಲ್ಲಿ ಶ್ರೀಮತಿಯವರ ತಂದೆ ರಾಮಣ್ಣನವರಿಗೆ ನಂಬಿಕೆ ಇರಲಿಲ್ಲ. ಮದುವೆ ಒಂದೇ ದಿವಸ ನಡೆದರೂ ಮದುವೆಗೆ ಹದಿನೈದು ದಿವಸಗಳ ಮೊದಲೇ ಮನೆಯ ತುಂಬ ಜನ ಬಂದು ಸೇರಿದರು. ಮದುವೆ ಮುಗಿದ ಮೇಲೆ ಒಂದು ತಿಂಗಳು ಮನೆಗೆ ಬಂದಿದ್ದ ನೆಂಟರು ಇದ್ದರು. ಅವರ ಮದುವೆ ಆದ ವರುಷವೇ ಕುವೆಂಪುರವರು ಈಗ ಇರುವ 'ಉದಯರವಿ' ಮನೆಯನ್ನು ಕಟ್ಟಿಸಿದ್ದು. ದಾಂಪತ್ಯ ಹಾಗೂ ಸಾಂಸಾರಿಕ ಜೀವನದ ಬಹುಭಾಗವನ್ನು ಶ್ರೀಮತಿಯವರು ಆ ಮನೆಯಲ್ಲಿಯೇ ಕಳೆದಿದ್ದಾರೆ. ಸ್ವಲ್ಪ ವರುಷಗಳು ಮಾತ್ರ ಬೆಂಗಳೂರಿನಲ್ಲಿದ್ದರು.

**ಪತಿಯ ಸಾಹಿತ್ಯದ ಬಗೆಗೆ**

ಪತಿಯ ಸಾಹಿತ್ಯವನ್ನೆಲ್ಲ ಓದಿದ್ದಾರೆ. ಮೆಚ್ಚಿಕೊಂಡಿದ್ದಾರೆ. ಆದರೆ "ನಾನು ವಿಮರ್ಶಿಸಲಾರೆ" ಎನ್ನುತ್ತಾರೆ ಹೇಮಾವತಿಯವರು. "ಅನೇಕ ಸಾಹಿತಿಗಳು ಮನೆಗೆ ಬರುತ್ತಾರೆ, ಗಂಟೆಗಟ್ಟಲೆ ಎಷ್ಟೆಷ್ಟೋ ದೊಡ್ಡ ದೊಡ್ಡ ವಿಷಯಗಳನ್ನು ಚರ್ಚಿಸುತ್ತಿರುತ್ತಾರೆ. ಆದರೆ ಅವರ ಮಧ್ಯದಲ್ಲಿ ನಾನು ಪ್ರವೇಶಿಸುವುದಿಲ್ಲ. ಅವರುಗಳ ಜೊತೆಯಲ್ಲಿ ಹೆಣ್ಣುಮಕ್ಕಳಿದ್ದರೆ ನಾನು ಜೊತೆಯಲ್ಲಿ ಕುಳಿತು ಮಾತನಾಡುತ್ತೇನೆ" ಎನ್ನುತ್ತಾರೆ. ಹೆಣ್ಣುಮಕ್ಕಳಿಲ್ಲದ ಗೋಷ್ಠಿಯಲ್ಲಿ ಹೇಮಾವತಿಯವರು ಅಷ್ಟಾಗಿ ಪ್ರವೇಶಿಸಲು ಇಚ್ಛಿಸುವುದಿಲ್ಲ.

ಈ ಸಂದರ್ಶನ ನಡೆಯುವುದಕ್ಕೆ ಮೊದಲು ಇತರರ ಅಭಿಪ್ರಾಯವೇ ನನ್ನದೂ ಆಗಿತ್ತು. ಹೊರಗಿನ ಬಹಳ ಜನ ಕುವೆಂಪುರವರನ್ನು "ಮಿತ ಭಾಷಣ" ಎಂದು ಭಾವಿಸಿದ್ದಾರೆ. ಹಾಗೆ ಭಾವಿಸಿದವರಲ್ಲಿ ನಾನೂ ಒಬ್ಬಳು. ಆದರೆ ಅವರನ್ನು ಕಂಡು ಮಾತನಾಡಿಸಿದ ಮೇಲೆ ನಮ್ಮ ಅಭಿಪ್ರಾಯ ಸಂಪೂರ್ಣವಾಗಿ ಬದಲಾಗುತ್ತದೆ. ಅವರ ಮನೆಯನ್ನು ಪ್ರವೇಶಿಸಿ, ಅವರೊಡನೆ ಮಾತಿಗೆ ಕುಳಿತ ನನಗೂ ಹಾಗೇ ಅನ್ನಿಸಿತು. ಕುವೆಂಪುರವರು ಎಷ್ಟು ಸಹಜವಾಗಿ, ಎಷ್ಟು ಸರಳವಾಗಿ, ಎಷ್ಟು ಹೊತ್ತು ಮಾತನಾಡಿದರೂ ಅವರು ಆಡಿದ ಮಾತೆಲ್ಲಾ ಆಣಿಮುತ್ತುಗಳು. ಹೊಸ ವಿಚಾರಗಳಿಂಡ ಕೂಡಿದ್ದು, ಆಳವಾದುದು. ಅದನ್ನು ನೆನೆದೇ ನನ್ನ ಮನಸ್ಸಿಗೆ ಎಲ್ಲಿಲ್ಲದ ಸಂತಸ ಉಂಟಾಗುತ್ತದೆ.

**ಆಂತರಿಕ ಸೌಂದರ್ಯ**

ಹೇಮಾವತಿಯವರು ಕುವೆಂಪುರವರಿಗೆ ತಕ್ಕಮಡದಿ. ಪ್ರಕೃತಿಯ ಸೌಂದರ್ಯವನ್ನು ಕಂಡು ಕವಿಯಂತೆ ಆ ಆನಂದದಲ್ಲಿ ಮೈಮರೆಯುವುದನ್ನು ಕಾಣಬಹುದು. ಮಾತುಗಳು ಅತ್ಯಂತ ಮಧುರ, ಮೃದು. ಕನ್ನಡದ ಸ್ವಚ್ಛ ಪುತ್ಥಳಿ ಹೇಮಾವತಿಯವರು. ದುಂಡುಮುಖ, ಹೊಳೆಯುವ ಕಾಂತಿಯುಕ್ತ ಕಣ್ಣುಗಳು, ಮುಗುಳ್ನಗೆಯಿಂದ ಕೂಡಿರುವ ಚೆಂದುಟಿಗಳು, ತುಂಬಿರುವ ಕೆನ್ನೆ, ಮುದ್ದಾದ ಗಲ್ಲ, ಎತ್ತರವೂ ಅಲ್ಲ ಕುಳ್ಳೂ ಅಲ್ಲದ ಮಧ್ಯಮಟ್ಟದ ದೇಹಾಕೃತಿ, ಆಭರಣಗಳ ಆಡಂಬರವಿಲ್ಲದ ನಿಸರ್ಗ ಸುಂದರಿ. ಇದು ಅವರ ಹೊರನೋಟದ ಸೌಂದರ್ಯ. ಆಂತರಿಕ ಸೌಂದರ್ಯದ ಹಿರಿಮೆ ಅತಿಶಯವಾದುದು. ಅವರ ಅಂತರಂಗ ಸಕಲ ಕಲೆಗಳ ಬೀಡು. ಬಿಡುವಿನ ದಿವಸಗಲಲ್ಲಿ ರಾಮಕೃಷ್ಣಾಶ್ರಮಕ್ಕೆ ಹೋಗುತ್ತಾರೆ. ಆ ಆಶ್ರಮದ ಪುಸ್ತಕಗಳನ್ನೆಲ್ಲಾ ಹೇಮಾವತಿಯವರು ಓದಿ ಮುಗಿಸಿದ್ದಾರೆ. ಆದರೆ ಅವರು "ಆಶ್ರಮದ ಪುಸ್ತಕಗಳನ್ನೆಲ್ಲಾ ಓದಿ ಮುಗಿಸುವುದೇನೋ ಮುಗಿಸಿದ್ದೇನೆ, ಆದರೆ ಎಷ್ಟರಮಟ್ಟಿಗೆ ಜೀರ್ಣಮಾಡಿಕೊಂಡಿದ್ದೇನೋ ಆ ಭಗವಂತನಿಗೆ ಗೊತ್ತು" ಎಂದು ಹೇಳಿ ತಮ್ಮ ಸೌಜನ್ಯವನ್ನು ವ್ಯಕ್ತಪಡಿಸಿದ್ದಾರೆ. ಆ ಆತ್ಮದಲ್ಲಿ ಅಹಂಕಾರಕ್ಕೆ ಅವಕಾಶವಿಲ್ಲ.

ರಾಮಕೃಷ್ಣ ಪರಮಹಂಸ, ವಿವೇಕಾನಂದರ ಸಂಪೂರ್ಣಪ್ರಭಾವ ಇವರ ಮೇಲಾಗಿದೆ. ಮಹಾಪುರುಷರ ಆಶೀರ್ವಾದದಿಂದ ಕುವೆಂಪುರವರಿಗೆ ದೊರೆತ ವೆಂಕಟರಮಣನ ವಿಗ್ರಹದಿಂದ, ಆ ದೇವರ ಮೇಲಿನ ಭಕ್ತಿ ವಿಶೇಷವಾಗಿ ಉಂಟಾಗಿದೆ.

**ತಾಯ್ನುಡಿ ಮಮತೆ:**

ಮಕ್ಕಳನ್ನು ಅತ್ಯಂತ ಮಮತೆಯಿಂದ, ಅಷ್ಟೇ ಶಿಸ್ತು, ಸಂಯಮದಿಂದ ಬೆಳೆಸಿದ್ದಾರೆ. ಪೂರ್ಣಚಂದ್ರ ತೇಜಸ್ವಿ, ಕೋಕಿಲೋದಯಚೈತ್ರ, ಇಂದುಕಲಾ,

ತಾರಿಣಿ ಈ ನಾಲ್ವರು ಮಕ್ಕಳಲ್ಲಿ ಮೊದಲ ಮಗ, ಮೊದಲ ಮಗಳನ್ನು ಕನ್ನಡ ಎಂ.ಎ. ಪದವೀಧರರಾಗುವಂತೆ ಮಾಡಿದ್ದಾರೆ. ಕನ್ನಡ ಮನೆ ಮಾತಾಗಿ, ಕನ್ನಡವನ್ನು ಉಪಯೋಗಿಸುವ ಅಧ್ಯಾಪಕರುಗಳೇ ತಮ್ಮ ಮಕ್ಕಳನ್ನು ಕನ್ನಡ ಶಾಲೆಗೆ ಕಳುಹಿಸುವುದಿಲ್ಲ. ಅಂಥ ಜನರೇ ಇಂದಿನ ಸಮಾಜದಲ್ಲಿ ಅತಿಯಾಗಿರುವವರು. ಆದರೆ ಕುವೆಂಪು ದಂಪತಿಗಳು ಆ ಅಪವಾದಕ್ಕೆ ಹೊರತಾಗಿ ನಿಂತಿದ್ದಾರೆ. ತಮ್ಮ ಮಾತೃಭಾಷಾಪ್ರೇಮ, ರಾಷ್ಟ್ರಭಾಷಾಪ್ರೇಮವನ್ನು ಮಕ್ಕಳಲ್ಲಿಯೂ ಹರಸಿ ಕನ್ನಡ ಎಂ.ಎ. ಓದಿಸಿದ್ದಾರೆ; ಆದರ್ಶ ಕನ್ನಡದ ದಂಪತಿಗಳು. ಹೆಣ್ಣುಮಕ್ಕಳಿಗೆ ಸಂಗೀತದ ಕಂಠಪಾಠದ ಜೊತೆಗೆ ವೀಣೆ ಪಿಟೀಲುಗಳ ಅಭ್ಯಾಸವೂ ಆಗಿದೆ. ಮಕ್ಕಳು ತಂದೆ ತಾಯಿಗಳಿಬ್ಬರ ಒಳ್ಳೆಯ ಗುಣಗಳನ್ನು ಹೊಂದಿ ಶೋಭಿಸಿದ್ದಾರೆ.

ದೇಶದ ಇಂದಿನ ಅನೇಕ ಸಮಸ್ಯೆಗಳನ್ನು ಕುರಿತು ಹೇಮಾವತಿಯವರು ಆಳವಾಗಿ ಆಲೋಚಿಸುತ್ತಾರೆ. ಜಾತೀಯತೆಯ ಬಗ್ಗೆ ವಿಶಾಲ ದೃಷ್ಟಿಯವರದ್ದು "ನಮ್ಮಲ್ಲಿ ಆ ಸಂಕುಚಿತ ಭಾವನೆ ಹೋಗಬೇಕು" ಎನ್ನುತ್ತಾರೆ. "ನಮ್ಮವರೇ ಅದ ನಮ್ಮ ಹರಿಜನರನ್ನು ನಾವು ಉಪಚರಿಸುವುದಿಲ್ಲ. ಅವರನ್ನು ನಾವು ತಿರಸ್ಕರಿಸುತ್ತೇವೆ. ಕ್ರಿಶ್ಚಿಯನ್ನರು ಅವರನ್ನು ಉಪಚರಿಸಿ ತಮ್ಮವರನ್ನಾಗಿ ಮಾಡಿಕೊಳ್ಳುತ್ತಾರೆ. ಅದೇ ಹರಿಜನರು ಕ್ರಿಶ್ಚಿಯನ್ನರಾದ ಮೇಲೆ ನಾವು ಅವರನ್ನು ಉಪಚರಿಸುತ್ತೇವೆ. ಈ ಕೀಳುಭಾವನೆ ನಮ್ಮಿಂದ ಹೋಗಬೇಕು" ಎನ್ನುತ್ತಾರೆ.

ವಿಶ್ವವಿದ್ಯಾಲಯಗಳಲ್ಲಿ ಪದವೀಧರರಾಗಿರುವವರಲ್ಲಿಯೂ ಈ ಜಾತೀಯತೆಯ ಬಗ್ಗೆ ಇಂಥ ಉದಾತ್ತವಾದ ಭಾವನೆಯನ್ನು ಪಡೆದಿರುವವರು ಬಹಳ ಕಡಿಮೆ. ಅಂಥದ್ದರಲ್ಲಿ ಕಾಲೇಜಿನ ಮೆಟ್ಟಿಲು ಹತ್ತದ, ನಗರದ ನಾಗರೀಕತೆಗೆ ಸಿಲುಕದ, ಯಾವುದೋ ಕುಗ್ರಾಮದಲ್ಲಿ, ಅದರಲ್ಲಿಯೂ ಒಕ್ಕಲು ಮನೆತನದಲ್ಲಿ ಹುಟ್ಟಿಬೆಳೆದ ಈ ಹೆಣ್ಣುಮಗಳು ತಳೆದಿರುವ ವಿಶಾಲದೃಷ್ಟಿಯ ಮಾನವೀಯತೆಯ ಉದಾತ್ತ ಭಾವನೆಗಳನ್ನು ನೋಡಿದರೆ ಆ ತಾಯಿಯ ಬಗೆಗೆ ಎಂಥವರಿಗೂ ಒಡನೆಯೇ ಗೌರವಭಾವನೆ ಉದಿಸುತ್ತದೆ.

**ಸಾಮಾಜಿಕ ಪ್ರಜ್ಞೆ**

"ದೇಶದ ಇಂದಿನ ಪರಿಸ್ಥಿತಿಯಲ್ಲಿ ಒಂದು ಸಂಸಾರದಲ್ಲಿ ಎರಡು, ಮೂರು ಮಕ್ಕಳಿಗಿಂತ, ಹೆಚ್ಚು ಇರುವುದು ಆ ವ್ಯಕ್ತಿಗೂ ತೊಂದರೆ, ದೇಶಕ್ಕೂ ಕಷ್ಟ" ಎಂದು ಕುಟುಂಬ ಯೋಜನೆಯನ್ನು ದೇಶದ ಹಿತದೃಷ್ಟಿಯಿಂದ ಮೆಚ್ಚಿ ನುಡಿಯುತ್ತಾರೆ. ಇಂಥ ರಾಷ್ಟ್ರಪ್ರಜ್ಞೆ ಭರತಖಂಡದ ಎಲ್ಲ ಮಹಿಳೆಯರಲ್ಲೂ ಮೂಡುವುದು ಅತ್ಯಾವಶ್ಯಕವೆಂದು ತೋರುತ್ತದೆ. ಈ ಎರಡು ನಿದರ್ಶನಗಳಿಂದ ಶ್ರೀಮತಿ ಹೇಮಾವತಿ ಕುವೆಂಪು ಅವರು ದೇಶದ ಆಗುಹೋಗುಗಳನ್ನು ಹೇಗೆ ಗಮನಿಸಿ, ಅರ್ಥಮಾಡಿಕೊಳ್ಳುತ್ತಿದ್ದಾರೆಂಬುದನ್ನೂ ಸಮಕಾಲೀನ ಸಾಮಾಜಿಕ ಪ್ರಜ್ಞೆಯನ್ನು ಹೇಗೆ ಮನದಟ್ಟು ಮಾಡಿಕೊಂಡಿದ್ದಾರೆಂಬುದನ್ನೂ ನಾವು ಚೆನ್ನಾಗಿ ತಿಳಿಯಬಹುದು.

'ನೀ ಕೈ ಬಿಡದಿರು'.

ಈ ರೀತಿ ಎಲ್ಲ ಹಿರಿಯ ಆದರ್ಶಗುಣಗಳಿಂದ ಕೂಡಿರುವ ಹೇಮಾವತಿಯನ್ನು ರಾಷ್ಟ್ರಕವಿ ಕುವೆಂಪು ಹೀಗೆ ಪ್ರಾರ್ಥಿಸುತ್ತಾರೆ.

"ಯಾರು ಕೈಬಿಟ್ಟರೂ
ನೀಬಿಡದಿರು
ನೀನೆನ್ನ ತಾಯಿ, ತಂದೆ,
ಗುರು, ದೇವರು!
ನಿನ್ನೊಡನೆ ಹಿಂದೆನಿತೊ
ಸಾರಿಹುಟ್ಟಿದೆ ಸತ್ತೆ:
ಮುಂದೆಯೂ ನಿನ್ನೊಡನೆ
ಜನ್ಮಜನ್ಮವೆನತ್ತೆ
ಹಿಂಜರಿಯನ್ನೈ, ಕ್ಲೇಶ
ಕಷ್ಟದಿಮತ್ತೆ ಮತ್ತೆ,
ಸಂಸಾರ ರೀತಿಯ
ರಾಸವಲ್ಲುದಿಸುತ್ತೆ!
ನೀನಿರಲು ನನ್ನೊಡನೆ,
ದುಮುಕೆ ಹೆದರಿಕೆ ಏಕೆ
ಸರ್ಪಕಾಳೀಯನಿರ್ಪ
ಮಡುವಾದರೂ?
ನೀಂ ಬರಲು ಬೆಂಬಿಡದೆ,
ನನಗನ್ಯರೇ ಬೇಕೆ?
ನೀಮ್ ಬಂದೆ ಬಹೆ,
ಕೊಂಚ ತಡವಾದರೂ!"

ಹೀಗೆ ಇವರ ಶಕ್ತಿಯನ್ನು ಅರ್ಥಮಾಡಿಕೊಂಡ ಕವಿ, ಜನ್ಮಜನ್ಮದ ಸ್ನೇಹದಿಂದ, ಇಂದು ಜೊತೆಗೂಡಿದಂತೆ, ಮುಂದೆಯೂ ಒಂದಾಗಲು ಮೊರೆಯಿಟ್ಟರೆ ಹೇಮಾವತಿಯವರು "ಅವರಿಗೆ ನಾನೇನು ಸಹಾಯ ಮಾಡಿದ್ದೇನೆ? ನನ್ನ ಮದುವೆಯ ಹೊತ್ತಿಗೆ ಅವರ ಅರ್ಧ ಸಾಹಿತ್ಯವೇ ನಿರ್ಮಾಣವಾಗಿತ್ತು. ನಾನು ಬಂದ ಮೇಲೆ ಮೇರುಕೃತಿ 'ಶ್ರೀರಾಮಾಯಣ ದರ್ಶನಂ' ರಚನೆಯಾಯಿತು" ಎಂದು ಅತ್ಯಂತ ಸೌಜನ್ಯದಿಂದ ಹೇಳುತ್ತಾರೆ. ಅವರ ಮಾತನ್ನೆ ಸಮರ್ಥಿಸುವುದಾದರೆ ಕವಿಯ ಹೃದಯವನ್ನು ಮಹಾಮಡದಿ ಪ್ರವೇಶಿಸುತ್ತಿದ್ದಂತೆಯೇ ಜಗದ್ಭವ್ಯ ಮೇರುಕೃತಿ ರಚನೆಯಾಗಿ ಕವಿ ಕುವೆಂಪು ಮಹಾಕವಿಯಾದರು. ಹಾಗೆ ಕುವೆಂಪುರವರ ಹೃದಯವೆಂಬ ವೀಣೆಯನ್ನು ಹೇಮಾವತಿ ಎಂಬ ಕೈಮಿಡಿದು ಲೋಕೋನ್ನತ ಕಾವ್ಯಧಾರೆಯನ್ನು ಹೊನಲಾಗಿ ಹರಿಸಿದೆ. ಕವಿಯನ್ನು ಮಹಾಕವಿಯನ್ನಾಗಿ ಮಾಡಿದ ಹೇಮಾವತಿಯವರ ವ್ಯಕ್ತಿತ್ವದ ಹಿರಿಮೆ ಊಹೆಗೆ ನಿಲುದದು!

ಕೃಪೆ: ಆಮುಖ

# ...ಮಹಾತ್ಮ ಜ್ಯೋತಿಬಾ ಫುಲೆ

ಮರೀಚಿಕೆಯಾಗಿದ್ದ ಕಾಲದಲ್ಲಿ, ತಕ್ಕಡಿ ಹಿಡಿದು ವ್ಯಾಪಾರಕ್ಕೆಂದು ಬಂದ ಬ್ರಿಟಿಷರ ಸ್ವಲ್ಪ ಸಹಾಯ ಪಡೆದು, ಅನೇಕ ಎಡರು ತೊಡರುಗಳನ್ನು ಎದುರಿಸಿ ಛಲ ಬಿಡದೆ ತ್ರಿವಿಕ್ರಮನಂತೆ ಹೋರಾಡಿ 1847ರಲ್ಲಿ ಅಂದರೆ ತಮ್ಮ 20ನೇ ವಯಸ್ಸಿನಲ್ಲಿ ರಾಷ್ಟ್ರ ದಾಖಲೆ ರೂಪದಲ್ಲಿ ಇಂಟರ್‌ಮೀಡಿಯೇಟ್ ಪರೀಕ್ಷೆ ಪಾಸ್ ಮಾಡುತ್ತಾರೆ. ಆಗಿನ ಕಾಲದಲ್ಲಿ ಕೆಳವರ್ಗದ ಜನರಲ್ಲಿ ಅಕ್ಷರಸ್ಥರು ಹಾಗೂ ಸುಶಿಕ್ಷಿತರು ಎಂದರೆ ಇವರೊಬ್ಬರೇ ಆಗಿದ್ದರು.

ಅಂದಿನ ದಿನಗಳಲ್ಲಿ ದಲಿತ ಸಮಾಜವನ್ನು ಮೇಲಕ್ಕೆತ್ತಬೇಕಾದ ಗುರುತರ ಮತ್ತು ಅನಿವಾರ್ಯತೆಯ ಜವಾಬ್ದಾರಿ ಫುಲೆ ಅವರ ಮೇಲಿತ್ತು. ಅಂದು ಫುಲೆಯವರಿಗೆ ಎರಡು ಮುಖ್ಯವಾದ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗಿತ್ತು. ಒಂದು - ಮಾನವ ಹಕ್ಕುಗಳಿಗಾಗಿ 'ಸಮಾನತಾ ಸಮಾಜ'ಕ್ಕಾಗಿ ಹೋರಾಡುವುದು, ಇನ್ನೊಂದು - ಇಂಗ್ಲಿಷರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಡುವುದು. ಆಗ ಇವರಿಗೆ ಮನಗಂಡಿದ್ದು ಏನೆಂದರೆ ಎಲ್ಲಿಯವರೆಗೆ ನಮ್ಮ ಜನರು ಸುಶಿಕ್ಷಿತರಾಗದೆ ಇದ್ದು, ಮಾನವ-ಮಾನವರ ಮಧ್ಯೆ ಈ ಜಾತಿ ಕಂದಕಗಳು ನಿರ್ಮಾಣವಾಗಿರುತ್ತದೋ, ಅಲ್ಲಿಯವರೆಗೆ ನಮ್ಮಲ್ಲಿ ಒಗ್ಗಟ್ಟೆಂಬುದು ಒಂದು ಕಗ್ಗಂಟಾಗಿಯೇ ಉಳಿದು ನಾವು ಒಗ್ಗಟ್ಟಾಗಿ ಬ್ರಿಟಿಷರ ವಿರುದ್ಧ ಹೋರಾಡುವುದು ಕಷ್ಟಸಾಧ್ಯವಾಗುವುದು. ಮತ್ತು ಇದೇ ಅವಕಾಶವನ್ನು ಬ್ರಿಟಿಷರು ಸದುಪಯೋಗಪಡಿಸಿಕೊಂಡು ನಮ್ಮ ಮೇಲೆ ಸವಾರಿ ಮಾಡಿ ಆಡಳಿತ ನಡೆಸುತ್ತಾರೆ. ಇದನ್ನು ತಪ್ಪಿಸಲು ಮೊದಲು ನಮ್ಮ ಸಮಾಜದಲ್ಲಿ ಎಲ್ಲರಿಗೂ ಸಮಾನತೆಯ ಹಕ್ಕು ಸಿಗಬೇಕು. ಆಗ ಮಾತ್ರ ನಾವು ಎಲ್ಲರೂ ಒಟ್ಟಾಗಿ, ಒಗ್ಗಟ್ಟಾಗಿ ಬ್ರಿಟಿಷರ ವಿರುದ್ಧ ಹೋರಾಡಬಹುದು ಎಂದು ನಿರ್ಧರಿಸಿ ಸಮಾನತೆಯ ಖಡ್ಗವನ್ನು ಜಳಪಿಸಲು ನಿರ್ಧರಿಸಿ, ತಮ್ಮ ಪತ್ನಿಯಾದ ಸಾವಿತ್ರಿಬಾಯಿ ಫುಲೆಯವರ ಸಹಕಾರದೊಂದಿಗೆ ಎಲ್ಲಾ ಅಸ್ಪೃಶ್ಯರು, ದಲಿತರಿಗೆ, ಮತ್ತು ಮಹಿಳೆಯರಿಗೆ ಸಾವಿರಾರು ವರ್ಷಗಳಿಂದ ಹಾಕಿದ್ದ ಮಾನಸಿಕ ಬೇಡಿಗಳನ್ನು ಕಳಚಿಸಿ ಇಂದು ಎಲ್ಲರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿಕೊಟ್ಟವರು ಈ ಮಹಾನ್ ವ್ಯಕ್ತಿ ಜ್ಯೋತಿಬಾಫುಲೆಯವರು. ಇವರನ್ನು ಪ್ರತಿಯೊಬ್ಬ ಭಾರತೀಯನೂ ಗೌರವಿಸಿ, ಪೂಜಿಸುವುದು ನಮ್ಮ ಕರ್ತವ್ಯ ಮತ್ತು ಅತ್ಯವಶ್ಯಕ.

# ರಂಗಭೂಮಿ ಮನುಷ್ಯ ಸಂಬಂಧವನ್ನು ಬೆಸೆಯುತ್ತದೆ – ಭರತ್ ಕುಮಾರ್ ಪೊಲಿಪು

ಮುಂಬೈ:– ನಾಟಕ ಒಂದು ಶಕ್ತಿಶಾಲಿ ಮಾಧ್ಯಮ. ನಾಟಕಕಾರನಿಗೆ, ನಿರ್ದೇಶಕನಿಗೆ ಸಾಮಾಜಿಕ ಜವಾಬ್ದಾರಿಗಳಿವೆ. ಸಮಾಜದ ಎಲ್ಲ ಬಗೆಯ ವಿದ್ಯಮಾನಗಳನ್ನು ವಿಮರ್ಶಿಸಿ ಒಂದು ನಾಟಕ ಹುಟ್ಟಿಕೊಳ್ಳುತ್ತದೆ. ಒಬ್ಬ ನಿರ್ದೇಶಕ ಅದನ್ನು ವರ್ತಮಾನಕ್ಕೆ ಸಲ್ಲುವಂತೆ ರಂಗದ ಮೇಲೆ ತರಬೇಕಾಗುತ್ತದೆ. ರಂಗಭೂಮಿಯು ಮನುಷ್ಯ ಸಂಬಂಧವನ್ನು ಬೆಸೆಯುವ ಕೆಲಸವನ್ನು ಮಾಡುತ್ತದೆ ಎಂಬುದಾಗಿ ರಂಗತಜ್ಞ ಡಾ. ಭರತ್‌ಕುಮಾರ್ ಪೊಲಿಪು ಅವರು ಅಭಿಪ್ರಾಯ ಪಟ್ಟರು. ಅವರು ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಇವುಗಳ ಸಂಯುಕ್ತ ಆಶ್ರಯದಲ್ಲಿ 'ರಂಗಸಂವಾದ' ಕಾರ್ಯಕ್ರಮದಲ್ಲಿ ಮಾತನಾಡುತ್ತಾ ರಂಗಭೂಮಿಯಲ್ಲಿ ತೊಡಗಿಸಿಕೊಂಡ ಎಲ್ಲರಿಗೂ ಅವರವರದ್ದೇ ಆದ ಜವಾಬ್ದಾರಿಗಳಿವೆ. ನಾಟಕ ಕಟ್ಟುವ ಕ್ರಿಯೆಯಲ್ಲಿ ಎಲ್ಲರೂ ಪಾಲ್ಗೊಳ್ಳಬೇಕು. ನಾಟಕ ಗೆಲ್ಲುವುದು ನಟರಿಂದಲೇ. ಹೀಗಿದ್ದೂ ಅಲ್ಲಿ ನಿರ್ದೇಶಕನ ಸೃಜನಶೀಲ ಮನಸ್ಸು ಕೆಲಸ ಮಾಡುತ್ತದೆ. ರಂಗಭೂಮಿಯಿಂದ ಒಳ್ಳೆಯ ಮನಸ್ಸುಗಳನ್ನು ನಿರ್ಮಿಸಲು ಸಾಧ್ಯ ಎಂದು ಅವರು ಅಭಿಪ್ರಾಯ ಪಟ್ಟರು. ನಾಟಕ ಜೀವನದ ಅವಿಭಾಜ್ಯ ಅಂಗ. ಮರಾಠಿ, ಗುಜರಾತಿ, ಹಿಂದಿ ಮೊದಲಾದ ಭಾಷೆಗಳಲ್ಲಿ ಹೊಸ ತಲೆಮಾರಿನ ಲೇಖಕರು ಸಶಕ್ತ ನಾಟಕ ರಚನೆಯಲ್ಲಿ ನಿರತರಾಗಿದ್ದಾರೆ. ಕನ್ನಡದಲ್ಲಿ ಹೇಳಿಕೊಳ್ಳುವಂತಹ ಯುವ ನಾಟಕಕಾರರು ಕಾಣುತ್ತಿಲ್ಲ. ಕನ್ನಡ ರಂಗಭೂಮಿ ಇದರಿಂದ ಸೊರಗುತ್ತಿದೆ ಎಂದು ಅವರು ಖೇದ ವ್ಯಕ್ತಪಡಿಸಿದರು.

ರಂಗಸಂವಾದದಲ್ಲಿ ಪಾಲ್ಗೊಂಡ ನಟ ಮೋಹನ್ ಮಾರ್ನಾಡ್ ಅವರು ನಾಟಕ ಒಂದು ಕಲೆ. ಬದುಕು ಸಹ ಒಂದು ಕಲೆಯೇ. ಉತ್ತಮ ನಟನಾಗುವುದು ಪಾತ್ರದ ಒಳಹೊಕ್ಕು ಅಭಿನಯಿಸಿದಾಗಲೇ. ನಟನೆ ಕೇವಲ ಕೃತಕ ಅಭಿನಯವಾಗಿ ಉಳಿಯಬಾರದು. ರಂಗಭೂಮಿಯಲ್ಲಿ ನಟ ಕಲಿಯುವುದು ಸಾಕಷ್ಟಿದೆ. ಒಳ್ಳೆಯ ನಟ ಇತರರ ಅಭಿನಯಕ್ಕೂ ಪ್ರೇರಣೆ ನೀಡಿ ರಂಗವನ್ನು ಸಂಭಾಳಿಸಿಕೊಂಡು ಹೋಗಬೇಕು. ಆಗ ನಾಟಕ ಗೆಲ್ಲುತ್ತದೆ ಎಂದರು. ರಂಗನಟಿ ಅಹಲ್ಯಾ ಬಲ್ಲಾಳ ಅವರು ಮಾತನಾಡಿ ಮುಂಬಯಿಯಂತಹ ಮಹಾನಗರದಲ್ಲಿ ಸುದೀರ್ಘ ನಾಟಕಗಳನ್ನು ಮಾಡಲು ರಂಗ ತಾಲೀಮಿನಲ್ಲಿ ಪಾಲ್ಗೊಳ್ಳುವುದು ಕಷ್ಟವಾಗುತ್ತದೆ. ಇದರ ಪರ್ಯಾಯವನ್ನು ಕಂಡುಕೊಳ್ಳಬೇಕಾಗಿದೆ. ನಾಟಕ ಎನ್ನುವುದು ಸಮ್ಮಿಶ್ರ ಕಲೆ. ಅದೊಂದು ರಸಪಾಕ ಎಂದು ಹೇಳಿ ವೈದೇಹಿ ಅವರ ಕವನವನ್ನು ನಾಟಕೀಯವಾಗಿ ವಾಚಿಸಿದರು.

ಖ್ಯಾತ ನಿರ್ದೇಶಕ, ನಾಟಕಕಾರ, ನಿರ್ದೇಶಕ ಡಾ.ಮಂಜುನಾಥ್ ಅವರು ಮಾತನಾಡಿ ಆಂಗ್ಲ ಭಾಷೆಯ ಪ್ರಭಾವದಿಂದ ಕನ್ನಡದಲ್ಲಿ ಹೊಸಬಗೆಯ ನಾಟಕಗಳೇನೋ ಬಂದವು. ಆದರೆ ಅವು ಒಣ ಹರಟೆಯಾದವು. ಜಾನಪದ ಹಿನ್ನೆಲೆಯನ್ನು ನಮ್ಮ ನಾಟಕಕಾರರು ಬಿಟ್ಟುಕೊಟ್ಟದ್ದರಿಂದ ರಂಗಭೂಮಿಗೆ ಹಿನ್ನಡೆಯಾಯಿತು. ಗ್ರೀಕ್, ಫ್ರೆಂಚ್ ಮೊದಲಾದ ರಾಷ್ಟ್ರಗಳ ಯಶಸ್ಸಿಗೆ ಅಲ್ಲಿನ ರಂಗ ಸಂಗೀತಗಳೇ ಕಾರಣವಾದವು. ಮರಾಠಿ, ಗುಜರಾತಿ ಮೊದಲಾದ ಭಾಷೆಗಳಲ್ಲಿ ಇವತ್ತಿಗೂ ರಂಗಭೂಮಿಯಲ್ಲಿ ಸಂಗೀತಕ್ಕೆ ವಿಶೇಷವಾದ ಮನ್ನಣೆಯಿದೆ. ಸಂಗೀತವಿಲ್ಲದ ನಾಟಕ ನೀರಸವೆನಿಸುತ್ತದೆ. ಹಾಡು ಬಣ್ಣವನ್ನು ತುಂಬುವ ಸಾಮರ್ಥ್ಯವನ್ನು ತುಂಬಿದೆ. ನಮ್ಮ ನಾಟಕಕಾರರು ರಂಗಸಂಗೀತದ ಕಡೆಗೆ ಗಮನಕೊಡಬೇಕು ಎಂಬ ಅಭಿಪ್ರಾಯಪಟ್ಟರಲ್ಲದೆ ಅನೇಕ ರಂಗಗೀತೆಗಳನ್ನು ಹಾಡಿ ಅಭಿನಯಿಸಿ ರಂಗಗೀತೆಗಳ ಮಹತ್ವವನ್ನು ನಿರೂಪಿಸಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡ ವಿಭಾಗದ ಸಂದರ್ಶಕ ಪ್ರಾಧ್ಯಾಪಕರಾದ ಡಾ.ಜೀವಿ ಕುಲಕರ್ಣಿ ಅವರು ನಾಟಕ ಒಂದು ಸಶಕ್ತ ಮಾಧ್ಯಮ. ಅದು ಸಮಾಜವನ್ನು ತಿದ್ದುವ ಕೆಲಸವನ್ನು ಮಾಡುತ್ತದೆ. ರಂಗಭೂಮಿ ನಮ್ಮ ವ್ಯಕ್ತಿತ್ವವನ್ನು ಮಾರ್ಪಡಿಸುತ್ತದೆ. ಬದುಕನ್ನು ನೇರ್ಪುಗೊಳಿಸುವ ಕೆಲಸ ರಂಗಭೂಮಿಯಿಂದ ಸಾಧ್ಯ ಎಂದು ಅವರು ಅಭಿಪ್ರಾಯ ಪಟ್ಟರು.

ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಮಂಡಳಿಯ ಸದಸ್ಯ, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಜಿ.ಎನ್.ಉಪಾಧ್ಯ ಅವರು ಮಾತಾನಾಡಿ ರಂಗಭೂಮಿ ಒಂದು ಜೀವಂತ ಮಾಧ್ಯಮ. ಮುಂಬಯಿ ಕನ್ನಡ ರಂಗಭೂಮಿಗೆ ಸುದೀರ್ಘ ಇತಿಹಾಸವಿದೆ. ಮುಂಬಯಿ ಕನ್ನಡ ರಂಗಭೂಮಿ ಇಂದಿಗೂ ಸಕ್ರಿಯವಾಗಿದೆ. ಆರ್.ಡಿ.ಕಾಮತ್ ಅವರಂತಹ ನಾಟಕಕಾರರನ್ನು ಮುಂಬಯಿ ಕನ್ನಡಕ್ಕೆ ಕೊಟ್ಟಿದೆ. ಅವುಗಳ ಕುರಿತು ಚರ್ಚೆಯಾಗಬೇಕು ಎಂದು ಈ ಸಂದರ್ಭದಲ್ಲಿ ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಆರಂಭದಲ್ಲಿ ಮಧುಸೂಧನ್ ರಾವ್ ಮತ್ತು ಸುಶೀಲಾ ದೇವಾಡಿಗ ಅವರು ರಂಗಗೀತೆಗಳನ್ನು ಹಾಡಿದರು. ಕನ್ನಡ ವಿಭಾಗದ ಸಂಶೋಧನ ಸಹಾಯಕರಾದ ಶ್ಯಾಮಲಾ ಪ್ರಕಾಶ್ ಅವರು ಅತಿಥಿಗಳನ್ನು ಪರಿಚಯಿಸಿದರು. ಸಂವಾದ ಕಾರ್ಯಕ್ರಮದಲ್ಲಿ ರಂಗ ಕಲಾವಿದರಾದ ಮಂಜುನಾಥಯ್ಯ,, ಅವಿನಾಶ್ ಕಾಮತ್, ಸುರೇಂದ್ರ ಮಾರ್ನಾಡ್, ಡಾ.ಜಿ.ಎಸ್.ಶಂಕರ್ ಲಿಂಗ, ಡಾ.ರೇಖಾ ಎನ್.ವಿ., ಡಾ.ಸುಮಾ ದ್ವಾರಕನಾಥ, ವಸಂತ ಕಲಕೋಟಿ, ಭವಾನಿ ಭಾರ್ಗವ, ನಾರಾಯಣ ನವಿಲೇಕರ್, ರತ್ನಾಕರ ಶೆಟ್ಟಿ, ಸಾ.ದಯಾ, ಡಾ.ಕರುಣಾಕರ ಶೆಟ್ಟಿ, ಹರೀಶ್ ಹೆಜ್ಮಾಡಿ, ಮನೋಜ್ ಎನ್. ಸಿ.ಎಸ್.ದಿನೇಶ್, ಪ್ರಮೋದ ದೇಶಪಾಂಡೆ, ಉಮಾ.ಕೆ.ಶೆಟ್ಟಿ, ವೀಣಾ ಜೋಶಿ, ಸದಾನಂದ ಅಮೀನ್, ಶಿವರಾಜ್ ಎಂ.ಜಿ, ಶೈಲಜಾ ಹೆಗಡೆ, ಸುಗಂಧಾ ಸತ್ಯಮೂರ್ತಿ, ಶೀಲಾ ಹೆಚ್.ಆರ್, ರೂಪಾ ಸಂಗೊಳ್ಳಿ, ಸರೋಜಿನಿ ತರೆ, ಸುರೇಖಾ ದೇವಾಡಿಗ, ಹೇಮಾ ಸದಾನಂದ ಅಮೀನ್, ಗೀತಾ ಮಂಜುನಾಥ್, ಸೂರಪ್ಪ ಕುಂದರ್, ಕುಮುದಾ ಆಳ್ವ, ಅನುಸೂಯ ಗಲಗಲಿ, ಅನಿತಾ ಶೆಟ್ಟಿ, ಆಶಾ. ಕೆ ಸುವರ್ಣ ಮೊದಲಾದವರು ಪಾಲ್ಗೊಂಡರು. ಕಾರ್ಯಕ್ರಮದ ಆರಂಭದಲ್ಲಿ ಡಾ.ಎಂ.ಎಂ.ಕಲಬುರ್ಗಿ ಅವರಿಗೆ ನುಡಿನಮನ ಸಲ್ಲಿಸಲಾಯಿತು. ಡಾ.ಜೀವಿ ಕುಲಕರ್ಣಿ ಅವರು ನುಡಿನಮನ ಸಲ್ಲಿಸಿದರು. ಎಂ.ಎ, ಪಿಎಚ್.ಡಿ, ಸರ್ಟಿಫಿಕೇಟ್, ಡಿಪ್ಲೋಮಾ ಕೋರ್ಸ್ ಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಗ್ರಂಥ ಗೌರವವನ್ನು ನೀಡಿ ಸ್ವಾಗತಿಸಲಾಯಿತು. ಕನ್ನಡ ವಿಭಾಗದ ಉಪನ್ಯಾಸಕಿ ಡಾ. ಪೂರ್ಣಿಮಾ. ಎಸ್ .ಶೆಟ್ಟಿ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

# ಭಾಷೆಯನ್ನು ಬಿಟ್ಟು ಬದುಕಲಾಗದು – ಹರ್ಷಾ ಭಟ್

ಭಾಷೆ ಒಂದು ದೊಡ್ಡ ಸಂಪತ್ತು ಇದ್ದ ಭಾಷೆ ಕೇವಲ ವ್ಯವಹಾರದ ದೃಷ್ಟಿಯಿಂದ ಬಳಕೆಯಾಗುತ್ತಿಲ್ಲ. ಅದು ಸಂಸ್ಕೃತಿ ವಾಹಕ. ಭಾಷೆ ಸಂಸ್ಕೃತಿಯನ್ನು ಮುಂದಿನ ತಲೆಮಾರಿಗೆ ಕೊಡಮಾಡುತ್ತದೆ. ಭಾಷೆ ಇಲ್ಲದಿದ್ದರೆ ಸಂಸ್ಕೃತಿ ಉಳಿಯದೆ ಭಾಷೆಯನ್ನು ಬಿಟ್ಟು ಬದುಕಲಾಗದು ಎಂದು ಭಾಷಾ ವಿಜ್ಞಾನಿ ಹರ್ಷಾ ಭಟ್ ಅವರು ಅಭಿಪ್ರಾಯ ಪಟ್ಟರು.

ಅವರು ಇತ್ತೀಚೆಗೆ ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗ ಆಯೋಜಿಸಿದ್ದ 'ಕನ್ನಡ ಸರ್ಟಿಫಿಕೇಟ್ ತರಗತಿಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ 'ಭಾಷಾ ಕಲಿಕೆಯ ಅಗತ್ಯತೆ' ಉಪನ್ಯಾಸ ನೀಡುತ್ತಾ ಭಾಷೆಯನ್ನು ಶಿಸ್ತುಬದ್ಧವಾಗಿ ಕಲಿಯಬೇಕು. ಭಾಷೆ ಅದು ಶುಷ್ಕವಾದುದಲ್ಲ. ಅದರಲ್ಲಿ ಜೀವನ ವಿಧಾನ ಅಡಗಿದೆ. ಹಲವು ಭಾಷೆಯನ್ನು ಕಲಿತರೆ ನಾವು ಅಲ್ಲಿಯ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವೆಂದು ಅಭಿಪ್ರಾಯಪಟ್ಟರು. ಭಾರತೀಯ ಭಾಷೆಗಳನ್ನು ಕಲಿಯಲು ನಮಗೆ ಕಷ್ಟವಾಗಿದೆ. ಆದರೆ ಚೈನೀಸ್ ಭಾಷೆಯಂತಹ ಪೂರ್ವ ರಾಷ್ಟ್ರಗಳ ಭಾಷೆಗಳನ್ನು ಕಲಿಯುವುದು ಕಷ್ಟ. ಭಾಷೆಯನ್ನು ಯಾವುದೇ ವಯಸ್ಸಿನಲ್ಲಿಯೂ ಯಾರೂ ಕಲಿಯಬಹುದು ಎಂದು ಅವರು ಅಭಿಪ್ರಾಯ ಪಟ್ಟರು.

ಕನ್ನಡ ಕಲಿಕಾಕೇಂದ್ರದ ಉದ್ಘಾಟನೆಯನ್ನು ಮಾಡಿ ಮಾತನಾಡಿದ ಸಂಶೋಧಕ ಡಾ.ಪಿ.ವಿ.ಎನ್.ಮೂರ್ತಿ ಅವರು ಎಲ್ಲಾ ಭಾಷೆಗಳು ಮೂಲದಲ್ಲಿ ಒಂದೇ ಆಗಿದ್ದಂತೆ ಕಾಣುತ್ತದೆ. ಭಾಷೆಗಳು ಮೂಲದಲ್ಲಿ ಸಂಕೇತಗಳ ಮುಖಾಂತರವಾಗಿ ರೂಪುಗೊಳ್ಳುತ್ತದೆ. ಜಗತ್ತಿನಲ್ಲಿ ಸಾವಿರಾರು ಭಾಷೆಗಳು ಇವತ್ತಿಗೂ ಚಾಲ್ತಿಯಲ್ಲಿವೆ. ಬೇರೆ ಬೇರೆ ಭಾಷೆಗಳನ್ನು ಕಲಿಯುವುದರ ಮುಖಾಂತರವಾಗಿ ಅವುಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವುದು ಸಾಧ್ಯವಿದೆ. ಭಾಷೆಯ ಮೂಲಕ ಸಂಸ್ಕೃತಿಯನ್ನು ಅರಿಯಲು ಸಾಧ್ಯವಿದೆ ಎಂದು ಅವರು ಅಭಿಪ್ರಾಯ ಪಟ್ಟರು.

ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಜಿ.ಎನ್ ಉಪಾಧ್ಯ ಅವರು ಮಾತನಾಡುತ್ತಾ ಎಲ್ಲಾ ಭಾಷೆಗಳ ಸಮಾನ ಭಾಷೆಗಳಲ್ಲಿ ಮೇಲು, ಕೀಳಾಟ ತರವಲ್ಲ. ದೇವ ಭಾಷೆ, ರಾಷ್ಟ್ರ ಭಾಷೆ, ರಾಜ್ಯಭಾಷೆ, ಪ್ರಾದೇಶಿಕ ಭಾಷೆ ಹೀಗ್ ಭಾಷೆಯ ನೆಪದಲ್ಲಿ ನಾವು ಹೋಳಾಗಿರುವುದು ದುರಂತ. ಭಾಷೆ ನಮ್ಮನ್ನು ಬೆಸೆಯುವ ಕೆಲಸವನ್ನು ಮಾಡುತ್ತದೆ. ಕನ್ನಡ ವಿಭಾಗ ಕನ್ನಡೇತರರಿಗೂ ಕನ್ನಡವನ್ನು ಕಲಿಸುವ ಕೆಲಸವನ್ನು ಕಳೆದ 3 ದಶಕಗಳಿಂದ ಮಾಡಿಕೊಂಡು ಬರುತ್ತಿದೆ. ಈ ವರ್ಷ ನವಿಮುಂಬಯಿ, ವಾಶಿ, ಪನ್ವೇಲ್, ಮೀರಾರೋಡ್ ಕೇಂದ್ರಗಳಲ್ಲಿ ಕನ್ನಡ ಕಲಿಕಾ ತರಗತಿಗಳನ್ನು ನಡೆಸಲಾಗುತ್ತದೆ. ಭಾಷೆ ಕಲಿಕೆಯಿಂದ ಪರಸ್ಪರ ಒಬ್ಬರೊನ್ನಬ್ಬರು ಅರ್ಥಮಾಡಿಕೊಳ್ಳಲು ಸಾಧ್ಯ. ಹೊಸ ಭಾಷಾ ಕಲಿಕೆಯಿಂದ ರಾಷ್ಟ್ರೀಯ ಭಾವೈಕತೆಗೆ ಅನುಕೂಲವಾಗುತ್ತದೆ. ಬದುಕು ಸಹ್ಯವಾಗುತ್ತದೆ ಎಂದು ಅಭಿಪ್ರಾಯ ಪಟ್ಟರು.

# ಬೇರು ಬಿಟ್ಟ ನೆನಪುಗಳು

ಚಿಕ್ಕಪುಟ್ಟ ವಿಷಯಗಳಿಗೆ ಎಂದೂ ಕಾಗದ ಬರೆಯದ ಮಾವನಿಂದ ಕಾಗದ ಬರುವುದೇ ಅಪರೂಪ. ವಿಷಯ ಕುತ್ತಿಗೆಗೆ ಬಂದಂತೆ ಕಂಡು ಬಂದರೆ, ಅದರಲ್ಲೂ ನನಗೆ ಸಂಬಂಧಿಸಿದ ವಿಷಯವಾದರೆ ಮಾತ್ರ ಅಕ್ಷರಬಾರದಿದ್ದ ನನ್ನ ಮಾವ ಪೋಷ್ಟ್‌ಮಾಸ್ಟರಿಗೆ ಹೇಳಿ ನಾಲ್ಕು ಅಕ್ಷರ ಗೀಚು ಹಾಕಿ ಪೋಷ್ಟ್ ಮಾಡುತ್ತಿದ್ದ. ಕಳೆದ ವರ್ಷ ಆದದ್ದೂ ಹಾಗೆನೇ. ಕೊನೆಯುಸಿರು ಎಳೆಯುತ್ತಿದ್ದ ಅಜ್ಜಿ ಬದುಕುವುದು ಕಷ್ಟವೆಂದು ತಿಳಿದು ಬಂದಾಗಲೇ ಮಾವನಿಂದ 'ಅಜ್ಜಿ ಸೀರಿಯಸ್, ಬೇಗ ಬಾ' ಅಂತ ಕಾಗದ ಬಂದದ್ದು ಟೆಲಿಗ್ರಾಂ ಕಳುಹಿಸಿದರೆ ಎಲ್ಲಿ ಹೆದರಿಕೊಳ್ಳುವನೋ ಅಂತ ಅಂಜಿ ಕಾಗದ ಬರೆಯುವುದನ್ನು ನೋಡಿದರೆ ನಾನಿನ್ನೂ ಚಿಕ್ಕ ಹುಡುಗ ಅಂತ ಎಣಿಸಿಕೊಂಡ ಮಾವನ ಮೇಲೆ ಸಿಟ್ಟು ಬರುತ್ತದೆ. ಮದುವೆಯಾಗಿದ್ದರೆ ಒಂದೆರಡು ಮಕ್ಕಳ ತಂದೆಯಾಗುತ್ತಿದ್ದ ನಾನು ಈ ಕಾರಣಕ್ಕಾಗಿಯೇ ಕಲ್ಪನಾಳನ್ನು ಮದುವೆಯಾಗಬೇಕೆನ್ನುವ ನನ್ನ ಆಸೆಯನ್ನು ಮಾವನ ಮುಂದೆ ಎತ್ತದೆ ಸುಮ್ಮನಿದ್ದುದು. ಇದು ಹೇಗೋ ಇರಲಿ, ಮಾವನಿಂದ ಇನ್ನೊಂದು ಕಾಗದವೋ ಟೆಲಿಗ್ರಾಮೋ ಬಂದ ಮೇಲೆ ನೋಡಿಕೊಳ್ಳೋಣ ಅಂತ ಕಾದುಕೊಂಡಿದ್ದ ನನಗೆ ಮರುದಿನ ಬಂದ ಕಾಗದದಲ್ಲಿ ಅಜ್ಜಿ ಸತ್ತ ವಿಷಯ ಓದಿ ದಿಗ್ಭ್ರಮೆಯಾಗಿತ್ತು. ದಡಬಡಿಸುತ್ತಾ ಊರಿಗೆ ಧಾವಿಸಿದ ನನಗೆ ಕಾಣಲು ಸಿಕ್ಕಿದ್ದು ಅಜ್ಜಿಯ ಸುಟ್ಟ ದೇಹದ ಹಿಡಿ ಬೂದಿ ಮಾತ್ರ!

ಈಗ ಕೂಡಾ 'ಅಜ್ಜ ಸೀರಿಯಸ್' ಅಂತ ಮಾವ ಕಾಗದ ಬರೆಯಬೇಕಾದರೆ ವಿಷಯ ಹದಗೆಟ್ಟಿದೆ ಅಂತ ಬೇರೆ ಹೇಳಬೇಕಾಗಿಲ್ಲ. ಕಳೆದ ವರ್ಷ ಅಜ್ಜಿ ಸಾಯುವ ಸಮಯ ದೇಹದಲ್ಲಿ ಗಟ್ಟಿಮುಟ್ಟಾಗಿದ್ದ ಅಜ್ಜ ಇನ್ನೊಂದು ಹತ್ತು ವರ್ಷ ಬದುಕಿ (ದರೆ) ಉಳಿಯಲು ಏನೂ ತೊಂದರೆ ಇಲ್ಲ ಅಂತ ಲೆಕ್ಕ ಹಾಕಿಕೊಂಡ ನನ್ನ ಲೆಕ್ಕಾಚಾರ ತಪ್ಪುತ್ತಿರುವಂತೆ ಕಾಣುತ್ತದೆ. ಅಜ್ಜಿ ಸತ್ತ ಮೇಲೆ ಜೀವಸತ್ವ ಕಳೆದುಕೊಂಡು ಬಡವಾದ ಅಜ್ಜ ಕೊರಗಿ ಕೊರಗಿ ಹಾಸಿಗೆ ಹಿಡಿದದ್ದು ವಾಂತಿ ಭೇದಿ ಪ್ರಾರಂಭವಾದಂದಿನಿಂದ.

ಒಂದು ನಾಲ್ಕು ದಿನ ಎದ್ದು ತಿರುಗಾಡುವಂತಾದರೆ ಮನೆಯಲ್ಲಿ ಕೂಡದ ಅಜ್ಜ ಮತ್ತೆ ಹದಿನೈದು ದಿನ ಹಾಸಿಗೆಯಲ್ಲಿ ಮಲಗಿದರೆ ಎಲ್ಲಾ ಹಾಸಿಗೆಯಲ್ಲೇ ಮಾಡಿಕೊಳ್ಳುತ್ತಿದ್ದ ಅಂತ ಮಾವ ಕಾಗದ ಬರೆದು ತಿಂಗಳು ಮೂರು ಆಗಲೇ ಕಳೆದು ಹೋಗಿರಬೇಕು. ನನಗೆ ಗೊತ್ತು ಅಜ್ಜನ ಸ್ವಭಾವ, ಪುಕ್ಕಟೆ ತಿಂದರೆ ಜೀರ್ಣವಾಗುವುದಿಲ್ಲವೆನ್ನುತ್ತಿದ್ದ ಅಜ್ಜ ಸದಾ ಒಂದಲ್ಲ ಒಂದು ಕೆಲಸದಲ್ಲಿ ನಿರತನಾಗಿರುತ್ತಿದ್ದುದು ನನಗೆ ಚೆನ್ನಾಗಿ ನೆನಪಿದೆ. ಬೆಳಗಿನಿಂದ ಸಂಜೆಯ ತನಕ ದಿನದ ಹೆಚ್ಚಿನ ಹೊತ್ತು ಮನೆಯ ಹೊರಗೆ ಇರುವ ಅಜ್ಜಯ್ಯನ ದಿನಚರಿ ಆರಂಭವಾಗುವ ರೀತಿಯೇ ಬೇರೆ.

ಉದಯರಾಗ ಹಾಡುತ್ತಾ ಎದ್ದವರು ಕಚ್ಚೆ ಸರಿ ಮಾಡಿಕೊಳ್ಳುತ್ತಾ ಹೊರ್ಕಡೆಗೆ ಅಂತ ತೋಡ ಬದಿಗೆ ಹೋದವರು ಬಹಿರ್ದೆಸೆಗೆ ಕೂಡುವ ಮೊದಲು ಮೂರು ಮುಡಿ ಗದ್ದೆಯ ಹತ್ತಿರ ತೋಡ ಇಳುಕಲಿನಲ್ಲಿ ಹಾಕಿದ ಗುಳಿಯಲ್ಲಿ ಎಷ್ಟು ಏಡಿಗಳು ಬಿದ್ದಿದ್ದಾವೆ ಅಂತ ನೋಡಿ ಬರುತ್ತಾರೆ. ಹಾಗೆ ಬರುವಾಗ ಗದ್ದೆ ಅಂಚಿನಲ್ಲೇ ಒಂದು ಸುತ್ತು ಹಾಕಿ ಯಾವ ಗದ್ದೆಯಲ್ಲಿ ಎಷ್ಟೆಷ್ಟು ನೀರು ಇದೆ ಅಂತ ನೋಡಿಕೊಂಡು, ಒಣಗಿದ್ದು ಕಂಡು ಬಂದರೆ ಗೌಡರಿಗೆ ಗೊತ್ತಾಗದಂತೆ ಮೊದಲೇ ಮಾಡಿಟ್ಟ ಗೌಡರ ಗದ್ದೆಯ ತೂಬಿನಿಂದ ನೀರು ಸರಾಗವಾಗಿ ಕೆಳಗಿನ ತಮ್ಮ ಗದ್ದೆಗೆ ಹರಿದು ಹೋಗುವಂತೆ ದಾರಿ ಮಾಡುತ್ತಾರೆ. ಹಾಗೆನೇ ತರಕಾರಿ ಹಿತ್ತಲ ಕಡೆ ಹೆಜ್ಜೆ ಹಾಕಿ ಬೆಂಡೆಕಾಯಿ ಎಷ್ಟು ಬಿಟ್ಟಿವೆ, ಅಲಸಂಡೆ ಎಷ್ಟು ಕಟ್ಟಾಗಬಹುದು, ಕುಂಬಳಕಾಯಿ ಎಷ್ಟು ದೊಡ್ಡದಾಗಿದೆ, ಹಸಿ ಒಣಗಿದ್ದು ಅಂತ ಒಂದು ಸಂತೆ ಖರ್ಚಿನಷ್ಟಾದರೂ ಮೆಣಸು ಆಗಬಹುದೇ, ನಿನ್ನೆ ಕಂಡ ಹಾಗಲಕಾಯಿ ಎಲ್ಲಿ ಹೋಯಿತು, ಗೆಣಸಿನ ಗದ್ದೆಗೆ ಮಂಗ ಹಾರಿದ್ದು ಯಾವಾಗ ಅಂತ ಎಲ್ಲಾ ಲೆಕ್ಕ ಹಾಕುತ್ತಾ ತೋಡಿನ ಒಂದು ಮೂಲೆಯಲ್ಲಿ ಕಚ್ಚೆ ಬಿಡಿಸಿ ಕುಳಿತುಕೊಂಡಾಗ ಹಟ್ಟಿಯಲ್ಲಿ ದನಗಳು ಕೂಗುವುದನ್ನು ಕೇಳಿ ಅವುಗಳನ್ನು ಗುಡ್ಡಕ್ಕೆ ಅಟ್ಟುವ ಅವಸರಕ್ಕೆ ಅವಸರ ಅವಸರವಾಗಿಯೇ ಕೈ ಕೆಲಸ ಪೂರೈಸುತ್ತಾರೆ. ದನಗಳನ್ನು ಗುಡ್ಡಕ್ಕೆ ಅಟ್ಟಿದವರು ಬೊಬ್ಬರ್ಯನ ಗುಡಿಯ ಹತ್ತಿರದ ಹಾಡಿಯಲ್ಲಿ ಹಾಕಿದ ಶೆಬೆಯಲ್ಲಿ ಒಂದಾದರೂ ಕಾಡು ಕೋಳಿ ಬಿದ್ದಿರಲೇಬೇಕು ಅಂತ ಅಂದಾಜು ಹಾಕಿದವರು ಅತ್ತ ಧಾವಿಸುತ್ತಾರೆ. ಶೆಬೆ ಹಾಕಿದ ದಿನದಿಂದ ದಿನಂಪ್ರತಿ ಚದುರಿ ಬರುತ್ತಿದ್ದ ಅರ್ಧ ಸೇರು ಭತ್ತದ ಲೆಕ್ಕ ಕಟ್ಟಿದರೆ ಇಷ್ಟರೊಳಗೆ ಮೂರು ನಾಲ್ಕು ಕೋಳಿ ಕ್ಯಾಷ್ ಕೊಟ್ಟು ಕೊಂಡುಕೊಳ್ಳಬಹುದಿತ್ತು ಅಂತ ತೀರ್ಮಾನಕ್ಕೆ ಬಂದ ನನ್ನ ಅಜ್ಜ ಜಾಗ ಬದಲಿಸಿ ಬೇರೆ ಕಡೆ ಶೆಬೆ ಹಾಕಿ ನೋಡಿ ಸೋತಿದ್ದಾರೆ. ಕಾಳು ಬಿಡದೆ ಹೆಕ್ಕಿ ತಿಂದು ಹೋಗುವ ಕಾಡು ಕೋಳಿಗಳ ಬಗ್ಗೆ ಕೊನೆ ಕೊನೆಗೆ ಬೇಸರ ಬಂದು ಇನ್ನು ಅಜ್ಜ ಅತ್ತ ತಲೆಹಾಕಿಯೂ ಮಲಗಲಿಕ್ಕಿಲ್ಲ ಎನ್ನಿಸುತ್ತಿದ್ದಂತೆ ಕೊನೆಗೂ ಒಂದು ಕಾಡುಕೋಳಿ ಅಜ್ಜಯ್ಯನ ಶೆಬೆಯಲ್ಲಿ ಸಿಕ್ಕಿ ಬಿದ್ದಿತ್ತು. ಆದರೇನು ಮಾಡುವುದು, ಅಜ್ಜಯ್ಯ ಹೋಗಿ ನೋಡುವಾಗ ಅದು ಬೇರೆ ಯಾವುದೋ ಪ್ರಾಣಿಗೆ ಆಹಾರವಾಗಿ ಅಜ್ಜಯ್ಯನಿಗೆ ಸಿಕ್ಕಿದ್ದು ಶೆಬೆಗೆ ಸಿಕ್ಕಿಕೊಂಡಿದ್ದ ಅದರ ಒಂದು ಕಾಲು ಮಾತ್ರ! ಹೆಚ್ಚಿನ ದಿನ ಮಂಡೆ ಹಾಳೆ ಹೊಲಿಯುತ್ತಾ ದನಕರುಗಳೆಲ್ಲಾ ಎತ್ತ ಹೋಗಿದ್ದಾವೆ ಅಂತ ನೋಡಿ ಬಂದವರು ಊಟಕ್ಕೆ ಮುಂಚೆ ಒಂದು ಹೊರೆ ಸೌದೆಯನ್ನು ಒಟ್ಟು ಮಾಡಿ ಮನೆ ಅಂಗಳದಲ್ಲಿ ತಂದು ಹಾಕುತ್ತಾರೆ. ಕೆಲವೊಮ್ಮೆ ಇಂತಹ ಸೌದೆ ಹೊರೆ ಹೊಟೇಲ್ ಶೀನನ ಅಂಗಳದಲ್ಲಿ ಹೋಗಿ ಬೀಳುವುದೂ ಇದೆ. ಇದಕ್ಕೆ ಬದಲಾಗಿ ನನ್ನ ಅಜ್ಜನಿಗೆ (ನಾನಿದ್ದಾಗ ನನಗೂ) ಒಂದು ಸ್ಟ್ರಾಂಗು ಕಾಫಿ ಹಾಗೂ ಏನಾದರೂ ಹಳಸಲು ತಿಂಡಿ ಸಿಗುತ್ತಿತ್ತು ಎನ್ನಿ.

ಮಧ್ಯಾಹ್ನದ ಊಟ ಮುಗಿಸಿ ಎಲೆ ಜಗಿಯುತ್ತಾ ಕುಳಿತ ಅಜ್ಜಯ್ಯನಿಗೆ ನೆರೆಮನೆಯ ಶಂಕರನೋ ಗೋವಿಂದನೋ ಪೇಟೆಯಲ್ಲಿ ಒಂದು ಲಾರಿ ಮೀನು ಬಂದು ಇಳಿದದ್ದು ವಿವರಿಸುತ್ತಿದ್ದಂತೆ ಬಾಯಿಯಲ್ಲಿ ನೀರೂರ ತೊಡಗುತ್ತದೆ. ಚಪ್ಪರದಲ್ಲೇ ತೊಂಡೆಕಾಯಿ ಹಣ್ಣಾಗಿ ಹಾಳಾಗುವುದು ಬೇಡ ಅಂತ ಕುಳಿತಲ್ಲಿಂದಲೇ ಸೊಸೆಗೆ ತೊಂಡೆಕಾಯಿ ಕೊಯ್ದುಕೊಂಡು ಬರಲಿಕ್ಕೆ ಹೇಳಿ ವೆಂಕಟರಾಯರ

✍ ಜಿ.ವಿ. ಕಂಚುಗಾರ

ಹೊಟೇಲಿನಲ್ಲಿ ತೊಂಡೆಕಾಯಿಗೆ ಒಳ್ಳೆಯ ಬೆಲೆ ಇದೆ ಅಂತ ಯೋಚಿಸುತ್ತಾ ಪೇಟೆಗೆ ಹೊರಡುವ ಸಿದ್ಧತೆ ಮಾಡುತ್ತಾರೆ.

ಮೀನು ಮಾರ್ಕೆಟಿನತ್ತ ಹೆಜ್ಜೆ ಹಾಕಿದ ಅಜ್ಜಯ್ಯ ಮೀನು ಮಾರಾಟದ ಹೆಂಗಸರನ್ನು ಮುತ್ತಿಕ್ಕಿದ ಗುಂಪನ್ನು ನೋಡಿ ನಡಿಗೆ ನಿಧಾನ ಮಾಡುತ್ತಾರೆ. ಎದುರಿಗೆ ಸಿಕ್ಕಿದ ಪರಿಚಿತರಿಂದ ಬಂಗಡೆ ಚಕ್ರಕ್ಕೆ ಹತ್ತು; ರೂಪಾಯಿಗೆ ಐವತ್ತು ಎಂದೂ, ಬೈಗೆ ಚಕ್ರಕ್ಕೆ ಇಪ್ಪತ್ತೈದು; ರೂಪಾಯಿಗೆ ನೂರು ಎಂದೂ ತಿಳಿದು ಬರುತ್ತಲೇ ಕತ್ತಲೆಯಾಗುವುದರೊಂದಿಗೆ ಜನ ಕರಗುವುದನ್ನು ನಿರೀಕ್ಷಿಸುತ್ತಾ ಮೀನು ಅಗ್ಗ ಆಗುವುದು ಇನ್ನು ಎಷ್ಟು ಹೊತ್ತಿಗೋ ಅಂತ ಲೆಕ್ಕ ಹಾಕುತ್ತಾ ನಿಂತ ಅಜ್ಜಯ್ಯನೊಂದಿಗೆ ಕೆಲಸ ಇಲ್ಲದ ಕೆಲವು ಜನ ಕಾಡು ಹರಟೆಗೆ ನಿಂತು ಬಿಡುತ್ತಾರೆ. ಇಂತಹ ಸಂದರ್ಭದಲ್ಲಿ ಅಜ್ಜಯ್ಯನವರಿಗೆ ಗೊತ್ತಿಲ್ಲದ ಎಷ್ಟೋ ವಿಷಯಗಳು ಅಜ್ಜಯ್ಯ ಎಣಿಸಿದಂತೆ ಇರದೆ ಹೊಸ ತಿರುವು ಹೊಂದಿರುವುದನ್ನು ನೋಡಿ ಆಶ್ಚರ್ಯ ಪಡುತ್ತಾರೆ.

ತಾವರೆಕೆರೆ ಸಂಕುವಿನ ಮಗಳು ಮೈ ನೆರೆತದ್ದೇ ತಡ, ಯಾರದೋ ಪಿಂಡ ಹೊಟ್ಟೆಯಲ್ಲಿ ಬೆಳೆಯುತ್ತಿದ್ದಂತೆ ಮದಗದ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡದ್ದು ನಿಜವಾಗಿ ಆತ್ಮಹತ್ಯೆಯಲ್ಲ, ಸಿಟ್ಟಿನಲ್ಲಿ ತಾಯಿ ತಂದೆ ಹೊಡೆದ ಪೆಟ್ಟನ್ನು ತಾಳಲಾರದೆ ಮೂರ್ಛೆ ತಪ್ಪಿಬಿದ್ದಾಗ ಮಗಳು ಸತ್ತಳೆಂದೇ ಎಣಿಸಿದ ತಂದೆ ತಾಯಿಗಳು ಕೈಯಾರೆ ಆಕೆಯನ್ನು ಕೆರೆಗೆ ಎಸೆದು ಬಂದದ್ದು ಅಂತ ಅಜ್ಜಯ್ಯನಿಗೆ ಗೊತ್ತಾದದ್ದು ಇಲ್ಲೇ. ನಡುಬೈಲಿನಲ್ಲಿ ಹೊಸದಾಗಿ ಬಿಡಾರ ಹೂಡಿರುವ ಗಿರಿಜ ಇದ್ದದ್ದು ಗಂಡನೊಂದಿಗೆ ಅಂತ ಎಣಿಸಿಕೊಂಡಿದ್ದ ನನ್ನ ಅಜ್ಜಯ್ಯನಿಗೆ ಅದು ಅವಳ

ಗಂಡ ಅಲ್ಲ, ಗಂಡನನ್ನು ಬಿಟ್ಟು ಯಾವನೋ ಲಾರಿ ಡ್ರೈವರನೊಂದಿಗೆ ಓಡಿ ಬಂದು ಇಲ್ಲಿ ತಳವೂರಿದ್ದು ಅಂತ ತಿಳಿದು ಬಂದದ್ದೂ ಇಲ್ಲೇ. ಆಗೊಮ್ಮೆ ಈಗೊಮ್ಮೆ ನಡುರಾತ್ರಿಗೆ ಬೆಂಕಿಯ ದೊಂದಿ ಬೀಸುತ್ತಾ ಗದ್ದೆಯ ಅಂಚಿನಲ್ಲಿ ಉದ್ದಕ್ಕೂ ನೆಟ್ಟಗೆ ಹೋಗುವುದು ಭೂತ ಅಲ್ಲ ಗದ್ದೆ ಕಾವಲಿಗೆ ಅಂತ ಹಳ್ಳಿ ಮನೆಗೆ ಹೋಗುವ ಶೇಷನಿಗೆ ಭೇಟಿಯಾಗಲು ಹೋಗುವ ವಿಧವೆ ಪದ್ದು ಅಂತ ಮನವರಿಕೆಯಾದದ್ದು ಇಲ್ಲೇ. ದೊಡ್ಡ ಹಕ್ಲು ಚಂದಣ್ಣನ ಮಗ ಬೆಂಗಳೂರಿಗೆ ಹೋಗಿ ವರ್ಷವಾಗುವುದರೊಳಗೆ ಸತ್ತದ್ದು ಟಿ.ಬಿ. ಆಗಿ ಅಲ್ಲ, ಯಾವುದೋ ಗುಪ್ತ ರೋಗದಿಂದ ಅನ್ನುವುದೂ ಗೊತ್ತಾಗುತ್ತದೆ. ಅದೇಕೆ? ಬೊಂಬಾಯಿಗೆ ಮದುವೆಯಾದ ಮೂರು ವರ್ಷದೊಳಗೇನೇ ಗೊಯ್‌ಕೊಡ್ಲು ವೀರಭದ್ರನ ಮಗಳು ಊರಿನಲ್ಲಿ ಹಂಚಿನ ಮನೆ ಕಟ್ಟಲಿಕ್ಕೆ ತಂದೆಗೆ ಸಹಾಯ ಮಾಡಿದ್ದು ಗಂಡನ ಹಣದಿಂದಲ್ಲ, ತಾನೇ ಮೈಮಾರಿ ಸಂಪಾದಿಸಿದ್ದು ಅಂತ ಅಜ್ಜಯ್ಯನ ಕಿವಿ ತನಕ ವಿಷಯ ಬಂದು ಮುಟ್ಟಿದ್ದು ಇಲ್ಲೇ ಅಲ್ಲವೇ? ಇಂಡಿಪೆಂಡೆಂಟ್ ಆಗಿ ಇಲೆಕ್ಷನ್‌ಗೆ ನಿಂತ ಲಕ್ಷ್ಮೀನಾರಾಯಣ ಚುನಾವಣೆಗೆ ನಿಂತದ್ದು ತನ್ನ ಇಚ್ಛೆಯಿಂದಲ್ಲ, ಐ ಕಾಂಗ್ರೆಸ್ಸನ್ನು ಕೆಡವಲಿಕ್ಕಾಗಿ ವಿರೋಧ ಪಕ್ಷದವರು ಕೊಟ್ಟ ಹಣದ ಮುಖ ನೋಡಿ ಎನ್ನುವುದೂ; ಟೈಲರಿಂಗ್ ರಂಗ ಹೆಂಡತಿಯನ್ನು ಬಿಟ್ಟು ಹೇಳದೆ ಕೇಳದೆ ಓಡಿ ಹೋದದ್ದು ಹೇಡಿತನವಲ್ಲ, ತನ್ನ ಹೆಂಡತಿ ತನಗೆ ಬಗೆಯುತ್ತಿರುವ ದ್ರೋಹಕ್ಕೆ ಎಂದು ಅಜ್ಜಯ್ಯನಿಗೆ ಗೊತ್ತಾದದ್ದು ಇಲ್ಲೇ.

ಹೀಗೆ ಒಂದೊಂದೇ ಹೊಸ ಹೊಸ ವಿಷಯ ಅಜ್ಜಯ್ಯನ ಗಮನಕ್ಕೆ ಬಂದರೂ ಅಜ್ಜಯ್ಯ ಅದನ್ನೆಲ್ಲಾ ಹರಕು ಬಾಯಿಯವರಂತೆ ಸಿಕ್ಕ ಸಿಕ್ಕವರಲ್ಲಿ ಹೇಳಲಿಕ್ಕೆ ಹೋಗುವುದಿಲ್ಲ. ಅವರವರ ಕರ್ಮ ಅವರವರು ಅನುಭವಿಸುತ್ತಾರೆ ಅನ್ನುವ ಅಜ್ಜ ಮೀನು ಮಾರ್ಕೆಟ್‌ನಿಂದ ಕಾಲ್ಕೀಳುವಾಗ ಬಂಗಡೆ ಬೈಗೆ ಅಂತ ಚೀಲ ತುಂಬಾ ತುಂಬಿಕೊಂಡೇ ಮನೆಯ ದಾರಿ ಹಿಡಿಯುವುದು.

ಈ ರೀತಿಯಾಗಿ ಸಾಗುವ ನನ್ನ ಅಜ್ಜಯ್ಯನ ದಿನಚರಿಯೊಂದಿಗೆ ಅಂಟಿಕೊಂಡ ಹವ್ಯಾಸಗಳೂ ವೈವಿಧ್ಯಮಯ. ಪ್ರತಿಯೊಂದು ವಿಷಯದಲ್ಲೂ ಆಸಕ್ತಿವಹಿಸಿ ಮೂಲ ಸಹಿತ ಕೆದಕಿ ನೋಡುವ ಸ್ವಭಾವದ ನನ್ನ ಅಜ್ಜ ಮೂಲತಃ ಸಂಪ್ರದಾಯವಾದಿಯಲ್ಲದಿದ್ದರೂ ಕಲೆಯ ದೃಷ್ಟಿಯಿಂದ ಎಲ್ಲವುದಕ್ಕೂ ಅವರ ತುಂಬು ಪ್ರೋತ್ಸಾಹ ಇದ್ದೆ ಇರುತ್ತದೆ. ಇದೇ ದೃಷ್ಟಿಯಿಂದ ನಾನು ಊರಿನಲ್ಲಿದ್ದಾಗ ಕೂಪ ಮಂಡೂಕದಂತಿದ್ದ ನನ್ನನ್ನು ಹಲವಾರು ವಿಶೇಷಗಳನ್ನು ತೋರಿಸಲಿಕ್ಕೆ ಕರೆದುಕೊಂಡು ಹೋಗಿದ್ದಾರೆ. ಆ ಸಮಯದಲ್ಲಿ ನಾನು ನೋಡಿದ ಸ್ಥಳ ಒಂದಲ್ಲ ಎರಡಲ್ಲ, ಕೊರ್ಗಿಕಂಬಳ, ಕಾಳಾವರ ಸೃಷ್ಟಿ, ಕೋಟೇಶ್ವರ ಜಾತ್ರೆ, ಕುಂದಾಪುರ ಸಂತೆ, ತಲಮಕ್ಕಿ ಗೆಂಡ, ಮಾರಿಗುಡಿ ಹಬ್ಬ, ಆಣೆಗುಡ್ಡೆ ದೇವಸ್ಥಾನ, ಹುಣ್ಸೆಮಕ್ಕಿ ಕೋಳಿಪಡೆ, ಗಂಗೊಳ್ಳಿ ಹೊಳೆ- ಹೀಗೆ ಹೇಳುತ್ತಾ ಹೋದರೆ ಹನುಮಂತನ ಬಾಲದಂತೆ ಬೆಳೆಯುತ್ತಾ ಹೋಗುತ್ತದೆ. ಯಕ್ಷಗಾನದಲ್ಲಿ ಅಷ್ಟೇನೂ ಆಸಕ್ತಿ ಇಲ್ಲದ ನನ್ನ ಅಜ್ಜನಿಗೆ ಹಾರಾಡಿ ರಾಮ ಅಂದರೆ ಬಹಳ ಅಚ್ಚು ಮೆಚ್ಚು. ಹಾರಾಡಿ ರಾಮನ ಕರ್ಣನ ಪಾತ್ರವನ್ನು 19 ಬಾರಿ ನೋಡಿದ್ದೇನೆ ಅಂತ ಹೆಮ್ಮೆಯಿಂದ ಹೇಳುವ ಅಜ್ಜನ ಬಾಯಿಯಿಂದ ಬರುವ ಹಾರಾಡಿ ರಾಮನ ಮಾತಿನ ವೈಖರಿಯನ್ನು ಯಾರು ಕೂಡಾ ಕೇಳುತ್ತಾ ಕುಳಿತುಕೊಳ್ಳಬೇಕು. ಹಾರಾಡಿ ರಾಮನ ವೇಷ ಮಾತುಗಾರಿಕೆಗಳನ್ನು ನನಗೂ ಪರಿಚಯಿಸಿಕೊಡಲಿಕ್ಕೆ ಸಮಯಾವಕಾಶದ ನಿರೀಕ್ಷೆಯಲ್ಲಿದ್ದ ನನ್ನ ಅಜ್ಜನಿಗೆ ಹಾರಾಡಿ ರಾಮ 'ರಾಮರಾಮ' ಎಂದ ದಿನ ಅತೀವ ದುಃಖವಾಯಿತು. ಮಾತ್ರವಲ್ಲ ಅದೇ ಅವರು ನೋಡಿದ ಕೊನೆಯ ಆಟವಾಯಿತು.

ನನ್ನ ವಿಷಯವನ್ನೇ ಹೇಳುವುದಾದರೆ ನನ್ನದೇ ಇಚ್ಛೆಯಾಗಿದ್ದರೆ ನಾನು S.S.L.C. ಯನ್ನು ಮಾಡುತ್ತಿರಲಿಲ್ಲ. ಡಿಗ್ರಿ ಮಾಡಿ ಬೆಂಗಳೂರಿನಲ್ಲಿ ಸರಕಾರಿ ನೌಕರಿಯೊಂದಿಗೆ ಕೈ ತುಂಬಾ ಸಂಬಳವನ್ನು ತೆಗೆದುಕೊಳ್ಳುತ್ತಿರಲಿಲ್ಲ. 7ನೆಯ ಕ್ಲಾಸು ಪಾಸು ಮಾಡಿದ ನಾನು ಸದ್ಯ ಶಾಲೆಯ ಕಿರಿಕಿರಿ ತಪ್ಪಿತು ಅಂತ ಒರಗೆಯ ಇತರ ಹುಡುಗರಂತೆ ಹೆಚ್ಚಾಗಿ ಇರುತ್ತಿದ್ದುದು ತೋಡ ಬದಿಯಲ್ಲಿ ಗಾಳ ಹಾಕುತ್ತಾ. ನನ್ನನ್ನು ಮುಂದೆ ಕಲಿಸಿ ಬುದ್ಧಿವಂತನನ್ನಾಗಿ ಮಾಡಬೇಕು ಅಂತ ಕನಸು ಕಾಣುತ್ತಿದ್ದ ಅಜ್ಜಿಯ ಬಲವಂತಕ್ಕೆ ಕಟ್ಟು ಬಿದ್ದು ಹೈಸ್ಕೂಲಿಗೆ ಸೇರಿಸಬೇಕೆಂದು ಅಜ್ಜಯ್ಯ ನನ್ನನ್ನು ಹುಡುಕಿಕೊಂಡು ಬರುವಾಗ ನಾನಿದ್ದುದು ಗೇರು ಮರದ ತುದಿಯಲ್ಲಿ. ಅಜ್ಜ ಅಜ್ಜಿಯ ಶ್ರಮವೊಂದಿಲ್ಲದಿದ್ದರೆ ನಾನು ಕೂಡಾ ನನ್ನ ಹಿಂದಿನ ಶಾಲೆಯ ಕ್ಲಾಸು ಮೇಟುಗಳಂತೆ ಏಳು ಎಂಟು ಚಿರಿಚಿರಿ ಮಕ್ಕಳ ತಂದೆಯಾಗಿ ಯಾರದೋ ಮನೆಯಲ್ಲಿ ಕತ್ತೆಯಂತೆ ದುಡಿಯಬೇಕಾಗುತ್ತಿತ್ತು ಎನ್ನುವುದು ಅರ್ಥವಾಗುತ್ತಿದೆ.

ಒಮ್ಮೆ ಅಂತೂ ನನ್ನ ಹೈಸ್ಕೂಲಿನ ಫೀಸು ತುಂಬಲು ಹಣದ ಅಡಚಣೆಯಾದಾಗ ನನ್ನ ಅಜ್ಜ ಇದ್ದ ಒಂದೇ ಒಂದು ಹುಂಜನನ್ನು ಕೋಳಿ ಪಡೆ ಸುಬ್ಬನಿಗೆ ಇಪ್ಪತ್ತು ರೂಪಾಯಿಗೆ ಮಾರಿದ್ದು ಎಂತಹ ಕಷ್ಟ ಪರಿಸ್ಥಿತಿಯಲ್ಲಿ ಎನ್ನುವುದು ನನಗೆ ಚೆನ್ನಾಗಿ ನೆನಪಿದೆ. ಅದೇ ರೀತಿ ಪುಸ್ತಕ ಹಾಗೂ ಯೂನಿಫಾರಂಗೆ ಹಣ ಇಲ್ಲದೇ ಪೇಚಾಡುತ್ತಿದ್ದ ಸಮಯ ದಷ್ಟ ಪುಷ್ಟವಾಗಿ ಬೆಳೆಗಿದ್ದ ಎಮ್ಮೆ ಕೋಣವನ್ನು ಮಾರುವ ಮನಸ್ಸು ಮಾಡಿದ ನನ್ನ ಅಜ್ಜಯ್ಯ ನನ್ನ ಪುಸ್ತಕ ಹಾಗೂ ವಸ್ತ್ರಗಳಿಗಾಗಿ ಯಾರಿಂದಲೋ ಬಡ್ಡಿಯ ಮೇಲೆ ಹಣ ತರಬೇಕಾಯಿತು. ಕೋಣವನ್ನು ಮಾರಬೇಕೆಂದುಕೊಂಡಿದ್ದ ಮೊದಲ ದಿನ ಮೊಳ- ಹಳ್ಳಿಗೆ ಹೋಗುವ ರಸ್ತೆ ಅಂಚಿನಲ್ಲಿ ಯಾವುದೋ ಎಮ್ಮೆಯ ಹಿಂದೆ ತಿರುಗುತ್ತಿದ್ದ ನಮ್ಮ ಕೋಣ ಮನೆಗೆ ಹಿಂತಿರುಗದೆ ಈ ರೀತಿ ಮೋಸ ಮಾಡುತ್ತದೆ ಅಂತ ಅಜ್ಜಯ್ಯನಿಗೆ ಗೊತ್ತಾಗುವುದಾದರೂ ಹೇಗೆ? ಪಾಪ ಎಂದುಕೊಳ್ಳುತ್ತಿದ್ದಂತೆಯೇ ಅಜ್ಜಯ್ಯನಿಗೆ ನಾನು ಒಮ್ಮೆ ಬಗೆದ ದ್ರೋಹ ನೆನಪಿಗೆ ಬಂದು ಕಣ್ಣು ತೇವವಾಗುತ್ತದೆ.

ಆ ದಿನ ಅಜ್ಜಯ್ಯನೊಂದಿಗೆ ಶಂಕರಯ್ಯನ ಹೊಟೇಲಿಗೆ ಚಾ ಕುಡಿಯಲು ಹೋದಾಗ ಚಾ ಕುಡಿಯುತ್ತಿದ್ದಂತೆ ಬೆಂಚಿನ ಕೆಳಗೆ ಬಿದ್ದುಕೊಂಡಿದ್ದ 8 ಆಣೆ ಪಾವಲಿಯನ್ನು ಅಜ್ಜಯ್ಯನಿಗೂ ಗೊತ್ತಾಗದಂತೆ ಅದೇ ದಿನ ರಾತ್ರಿ ಬಂಡಾರಕಾರರ ಗದ್ದೆ ಬಯಲಿನಲ್ಲಿದ್ದ ಯಕ್ಷಗಾನ ನೋಡಲಿಕ್ಕಾಯಿತು ಅಂತ ಕಿಸೆಗೆ ತುರುಕಿಕೊಂಡವನಿಗೆ ಅಜ್ಜ ಅದೇ 8 ಆಣೆಗಾಗಿ ಅಲ್ಲಲ್ಲಿ ಹುಡುಕಲು ಪ್ರಾರಂಭಿಸಿದಾಗಲೇ ನನಗೆ ಗೊತ್ತಾದದ್ದು- ಅದು ಅಜ್ಜಯ್ಯನದೇ ಎಂದು. ಅಜ್ಜಯ್ಯನ ಹತ್ತಿರ ಇನ್ನೂ ಹಣ ಇದೆ ಅಂತ ಎಣಿಸಿಕೊಂಡ ನನಗೆ ಅಜ್ಜಯ್ಯನ ಹತ್ತಿರ ಇದ್ದದ್ದೆ ಅಷ್ಟು ಅಂತ ಗೊತ್ತಾದದ್ದು ಪಂಚೆ ಕೊಡಕುತ್ತಾ 'ಇದ್ದ 8 ಆಣೆ ಕಳಕೊಂಡೆ, ನಾಳೆ ಬಂದಾಗ ಕೊಡುತ್ತೇನೆ' ಅಂತ ಶಂಕರಯ್ಯನಿಗೆ ಹೇಳಿ ರಸ್ತೆಗಿಳಿದಾಗ. ನಾನು ಮಾತ್ರ ರಾತ್ರಿ ಆಟ ನೋಡುವ ಗುಂಗಿನಲ್ಲಿದ್ದು ಕಣ್ಣ ಮುಂದೆ ಚಿಟ್ಟಾಣಿ ಕುಣಿಯುತ್ತಿರುವಂತೆ ಭಾಸವಾಗಿ ಆ 8 ಆಣೆ ನನಗೆ ಸಿಕ್ಕಿದೆ ಅಂತ ಹೇಳುವಷ್ಟು ವ್ಯವಧಾನವನ್ನು ತೆಗೆದುಕೊಂಡಿರಲಿಲ್ಲ. ಈ ಸಲ ಅಜ್ಜಯ್ಯನೆದುರಿಗೆ ಎಲ್ಲವನ್ನೂ ಸವಿಸ್ತಾರವಾಗಿ ಹೇಳಿಕೊಳ್ಳಬೇಕು ಅಂತ ಯೋಚಿಸುತ್ತಿದ್ದಂತೆಯೇ ಹೇಳಿಕೊಂಡಷ್ಟು ಸಂತೋಷವಾಗುತ್ತದೆ.

ಗಡಿಯಾರದ ಕಿರ್‌sss ಶಬ್ದಕ್ಕೆ ಯೋಚನಾ ಲಹರಿ ಕಡಿದುಕೊಳ್ಳುವುದರೊಂದಿಗೆ ಹಾಸಿಗೆಯಲ್ಲೇ ಮುದುಡಿಕೊಂಡು ಮಲಗಿಕೊಂಡಿರುವುದು ಅರಿವಿಗೆ ಬರುತ್ತದೆ. ಬಡಿದೆಬ್ಬಿಸಿದವರಂತೆ ಹಾಸಿಗೆಯಿಂದ ಎದ್ದವನ ದೇಹ ಚುರುಕಾಗುತ್ತದೆ. ಊರಿಗೆ ಹೋಗುವ ಸಿದ್ಧತೆಯೊಂದಿಗೆ ಮನೆಯ ಹೊರಗೆ ಕಾಲಿಡುವಾಗ ಬೆಳಕು ಸರಿಯಾಗಿ ಹರಡಿರುವುದನ್ನು ಅವಲೋಕಿಸಿ ಅಜ್ಜಯ್ಯನಿಗೆ ಅಂತ ವಸ್ತ್ರ, ಹಣ್ಣು-ಹಂಪಲು ಕೊಂಡು ಕೊಂಡವ ಎದೆಯುಸಿರು ಬಿಡುತ್ತಾ ಹೊರಡುವ ತರಾತುರಿ ಯಲ್ಲಿದ್ದ ಬಸ್ಸು ಹತ್ತಿ ಕುಳಿತುಕೊಂಡೆ. ಕಿಟಕಿಯಿಂದ  ಬೀಸುತ್ತಿದ್ದ ಗಾಳಿಗೆ ಮೈಯೊಡ್ಡಿ ಕಣ್ಣು ಮುಚ್ಚಿಕೊಳ್ಳುತ್ತಿದ್ದಂತೆಯೇ ಎಳೆ ಎಳೆಯಾಗಿ ಬಿಚ್ಚಿಕೊಂಡ ನೆನಪುಗಳ ಮಧ್ಯೆ ಹೊಸ ವಸ್ತ್ರ ಧರಿಸಿಕೊಂಡು ಶೆಟ್ಟಿ ಅಗರಬತ್ತಿಯವರ ನಶ್ಯ ಏರಿಸುತ್ತಾ ಜ್ಯೋತಿ ಪುಸ್ತಕಾಲಯದಿಂದ ತಂದ ಭಗವದ್ಗೀತೆ ಹಿಡಿದು ನಿಂತ ಅಜ್ಜಯ್ಯ ಕಂಡು ಬಂದ.

□

# ತೆರೆ–ಮರೆಯಲ್ಲಿ....

**– (ಬಡಕಲಾವಿದನೊಬ್ಬನ ಬದುಕು...)**

ರಂಗು–ರಂಗಿನ ವರ್ಣರಂಜಿತ ರಂಗಮಂಟಪ.
ಕಾರ–ಕತ್ತಲದ ನಡುವೆ ಜಗಮಗಿಸಿ ಹೊಳೆವ, ವಿದ್ಯುತ್ ದೀಪಾಲಂಕಾರ.
ವಿಜೃಂಭಣೆಯಿಂದ ತೆರೆ ಕಾಣುತಲಿದೆ, ಮೈ–ಮನ ನವಿರೇಳಿಸುವ ಪೌರಾಣಿಕ ಕಥಾನಕ,
"ಪ್ರಚಂಡ–ರಾವಣ..."

ಫಳ–ಫಳನೇ ಹೊಳೆವ ಸಕಲ ರಾಜ–ಪೋಷಾಕು..
ಮಿರಿ–ಮಿರಿ ಮಿಂಚುವ ವಜ್ರ–ವೈಢೂರ್ಯದ ಕಿರೀಟ.
ವೇದಿಕೆಯನ್ನೇರಿ ನಿಂತು ನಸು–ನಗುತಿರುವ ರತ್ನಖಚಿತ ಸಿಂಹಾಸನ.
ಅಕ್ಕ–ಪಕ್ಕದಲ್ಲಿ ಜೋಕಾಲಿಯಂತೆ ಬೀಸಲು ಸಜ್ಜಾಗಿವೆ, ಜೀಕುವಂತಿರುವ ಛತ್ರ–ಚಾಮರಗಳು.

ಇಡೀ ರಂಗಸ್ಥಳವೇ ನಡುಗುವ ಪರಿಯಲಿ ನಡೆಯುತಲಿದೆ,
ಪರನಾರಿ ಚೋರ ದಶಮುಖ ರಾವಣನ ಮಹಾವೈಭವದ ಒಡ್ಡೋಲಗ.....
ಬಲ್ಲಿರೇನಯ್ಯಾ,
ಈ ಲಂಕಾಪುರಕ್ಕೆ ಮಹಾ ಅಧಿಪತಿ ಯಾರೆಂದು ಕೇಳಬಲ್ಲಿರಿ...?!

ಹೆಸರು ಕೇಳಿದೊಡನೆಯೇ,
ಮೈ–ಮನದಲಿ ನಡುಕ ಎಬ್ಬಿಸುವ ಪರಿಯ ಗಾಂಭೀರ್ಯ ನಡೆ–ನುಡಿ; ವರ್ತನೆ.
ಅಕಟಕಟಾ..! ಅದೇನ್ ಅಸಲಿ ಗುಣ–ನಡತೆಯ ಮಾತಿನ ವರಸೆಯ ಕಸರತ್ತು..
ದಣಿದ ದೇಹಕೆ ತಂಪರೆಯಲು ಕೈಗೊಬ್ಬ –ಕಾಲಿಗೊಬ್ಬ ಸೇವಕ...

ಯಾರಲ್ಲಿ..?!
ಅಪ್ಪಣೆ ಮಹಾಪ್ರಭು......
ನಡೆದುದ್ದೇ ನಡೆದುದ್ದು, ರಾತ್ರಿಯುದ್ಧಕ್ಕೂ....
ಲಂಕಾಪುರ ದೊರೆಯ ರಾಜ–ಲೀಲೆಯ ವೈಭವ...ರುದ್ರ ನರ್ತನ..

ನಿಶೆ ಕಳೆದು, ಉಷೆ ಮೂಡಿತು. ಸರಿದ ತೆರೆ, ಮೆಲ್ಲಗೆ ಮರೆಯಾಯಿತು.
ಅವಸರವಸರವಾಗಿ, ಚೌಕಿಗೆ ಓಡಿ ಬಂದ.
ಕಳಚಿದ ತನ್ನ ರಾಜ–ಗಾಂಭೀರ್ಯ ವೇಷವ.
ಎತ್ತಿ ಬದಿಗಿಟ್ಟ ಅಲ್ಲಲ್ಲಿ ತೇಪೆ ಹಾಕಿದಂತೆ ಕಂಡು ಬಂದ ಕೊಳೆ ಪ್ಯಾಂಟನ್ನ.

ಧರಿಸಿಕೊಂಡ ಮಾಸಲು ಪಂಚೆಯನ್ನ; ತೊಟ್ಟುಕೊಂಡ ಸವೆದ ಹಳೆಯ ಷರ್ಟ್‌ನ್ನ.
ಹೆಗಲೇರಿಸಿದ ಕಾಣದಿಹ ಚಿಕ್ಕ ತೂತುಗಳ ಶಾಲೊಂದನ್ನ.
ಕೈ ಜೋಡಿಸಿ ತುಸು ತಲೆ ಬಾಗಿ ಕೇಳಿ ನಿಂತ ಮೇಳದ ಸಂಚಾಲಕರನ್ನ,
"ಯಜಮಾನ್ರೇ..."

ಹ್ಲುಂ, ಗುತ್ತಾಯ್ತ್.
ಇವತ್ತ್ ಕಲೆಕ್ಷನ್ ಆದ್ದ್ ಮಸ್ತ್ ಕಡ್ಮಿ; ಇದ್ರೂ, ನಿಂಗ್ ಕಡ್ಮಿ.
ತಕಂಡಿದ್ ಸಾಲ್ಕೇ, ಸ್ವಲ್ಪ ವಜಾವಟ್ ಮಾಡ್ಕಂಡ್ ಕೊಡ್ತೆ,
ತಕೋ...ಈ ನೂರೂಪಾಯ್ಯೆ...

ಅಂದ್ಹಾಂಗ್ ಇವತ್ತಿನ ಪ್ರಸಂಗ, "ಸತ್ಯ ಹರಿಶ್ಚಂದ್ರ"
ಸತ್ಯವಂತ ಹರಿಶ್ಚಂದ್ರನ ಪಾತ್ರಧಾರಿ, ಅದ್ ನೀನೇ ಅಲ್ದಾ ಮರಾಯಾ...
ಚೆಂದ ರೀತ್ಯಾಗ್ ಮಾಡ್ ಕಲೆಕ್ಷನ್ ಮಸ್ತ್ ಆದ್ರ್ಯನಾಳೆಗ್ ಒಂಚೂರ್ ಜಾಸ್ತಿ ದುಡ್ಡ್ ಕೊಡ್ತೆ"
ತನ್ನೆಜಮಾನ್ರು ಎಚ್ಚರಿಸಿದಾಗಲೇ ಅಂದುಕೊಂಡ, ಇನ್ನು ತನಗೆ ಸುಡುಗಾಡೇ ಗತಿ ಎಂದು.

ಲಂಕಾಧಿಪತಿ ಎಂದೆನಿಸಿದ ತನಗೀಗ, ಚಿಲ್ಲರೆಯೇ ಅಧಿಪತಿ.
ಅದನ್ನೆಣಿಸುತ್ತಲೇ, ತೆರಳಿದ ತನ್ನ ಸಂಸಾರ ಬೀಡಿನೆಡೆಗೆ.
ಇಷ್ಟರಲ್ಲಿಯೇ, ಸಾಗಿಸಿ ದಡ ತೇಲಿಸಬೇಕಿವನ ಮಡದಿ,
ತುಂಬು ಸಂಸಾರ–ನೌಕೆಯ...
ಅಪ್ಪಣೆ ಮಹಾಪ್ರಭು......
ನಡೆದುದ್ದೇ ನಡೆದುದ್ದು, ರಾತ್ರಿಯುದ್ಧಕ್ಕೂ....
ಲಂಕಾಪುರ ದೊರೆಯ ರಾಜ–ಲೀಲೆಯ ವೈಭವ...ರುದ್ರ ನರ್ತನ..

ನಿಶೆ ಕಳೆದು, ಉಷೆ ಮೂಡಿತು. ಸರಿದ ತೆರೆ, ಮೆಲ್ಲಗೆ ಮರೆಯಾಯಿತು.
ಅವಸರವಸರವಾಗಿ, ಚೌಕಿಗೆ ಓಡಿ ಬಂದ.
ಕಳಚಿದ ತನ್ನ ರಾಜ–ಗಾಂಭೀರ್ಯ ವೇಷವ.
ಎತ್ತಿ ಬದಿಗಿಟ್ಟ ಅಲ್ಲಲ್ಲಿ ತೇಪೆ ಹಾಕಿದಂತೆ ಕಂಡು ಬಂದ ಕೊಳೆ ಪ್ಯಾಂಟನ್ನ.

ಧರಿಸಿಕೊಂಡ ಮಾಸಲು ಪಂಚೆಯನ್ನ; ತೊಟ್ಟುಕೊಂಡ ಸವೆದ ಹಳೆಯ ಷರ್ಟ್‌ನ್ನ.
ಹೆಗಲೇರಿಸಿದ ಕಾಣದಿಹ ಚಿಕ್ಕ ತೂತುಗಳ ಶಾಲೊಂದನ್ನ.
ಕೈ ಜೋಡಿಸಿ ತುಸು ತಲೆ ಬಾಗಿ ಕೇಳಿ ನಿಂತ ಮೇಳದ ಸಂಚಾಲಕರನ್ನ,
"ಯಜಮಾನ್ರೇ..."

ಹ್ಲುಂ, ಗುತ್ತಾಯ್ತ್.
ಇವತ್ತ್ ಕಲೆಕ್ಷನ್ ಆದ್ದ್ ಮಸ್ತ್ ಕಡ್ಮಿ; ಇದ್ರೂ, ನಿಂಗ್ ಕಡ್ಮಿ.
ತಕಂಡಿದ್ ಸಾಲ್ಕೇ, ಸ್ವಲ್ಪ ವಜಾವಟ್ ಮಾಡ್ಕಂಡ್ ಕೊಡ್ತೆ,
ತಕೋ...ಈ ನೂರೂಪಾಯ್ಯೆ...

ಅಂದ್ಹಾಂಗ್ ಇವತ್ತಿನ ಪ್ರಸಂಗ, "ಸತ್ಯ ಹರಿಶ್ಚಂದ್ರ"
ಸತ್ಯವಂತ ಹರಿಶ್ಚಂದ್ರನ ಪಾತ್ರಧಾರಿ, ಅದ್ ನೀನೇ ಅಲ್ದಾ ಮರಾಯಾ...
ಚೆಂದ ರೀತ್ಯಾಗ್ ಮಾಡ್ ಕಲೆಕ್ಷನ್ ಮಸ್ತ್ ಆದ್ರ್ಯನಾಳೆಗ್ ಒಂಚೂರ್ ಜಾಸ್ತಿ ದುಡ್ಡ್ ಕೊಡ್ತೆ"
ತನ್ನೆಜಮಾನ್ರು ಎಚ್ಚರಿಸಿದಾಗಲೇ ಅಂದುಕೊಂಡ, ಇನ್ನು ತನಗೆ ಸುಡುಗಾಡೇ ಗತಿ ಎಂದು.

ಲಂಕಾಧಿಪತಿ ಎಂದೆನಿಸಿದ ತನಗೀಗ, ಚಿಲ್ಲರೆಯೇ ಅಧಿಪತಿ.
ಅದನ್ನೆಣಿಸುತ್ತಲೇ, ತೆರಳಿದ ತನ್ನ ಸಂಸಾರ ಬೀಡಿನೆಡೆಗೆ.
ಇಷ್ಟರಲ್ಲಿಯೇ, ಸಾಗಿಸಿ ದಡ ತೇಲಿಸಬೇಕಿವನ ಮಡದಿ,
ತುಂಬು ಸಂಸಾರ–ನೌಕೆಯ...

**– ಶಯದೇವಿಸುತೆ ಮರವಂತೆ**







ಆಗಸ್ಟ್ 15ರಂದು ಅಸೋಸಿಯೇಶನ್‌ನಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಅಂದು ಭಾರ್ಗವಿ ನೃತ್ಯ ತಂಡ, ಉಡುಪಿ ಅವರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿದವು.






## MATRIMONIAL

Alliance invited from well educated and well settled working Kannada Brahmin Boy (Mumbai preferred) for 24 year 5'4" Girl; Msc; Kaushik Gothra; Smartha Brahmin, well settled working in Axis Bank as "FOREX OFFICER' in Mumbai.

Contact No: Mr. Prakash Begoor - 9223507003

Email: psbegoor@tatapower.com

Date of Publication : 10th of every month RNI No. 040015 / 83
Regd. No. MNE / 93 / 2015-17 Date of Posting:10/11th of every month
at Mumbai Patrika Channel Sorting Office G.P.O.

## FORTHCOMING PROGRAMMES:



## SHREE SWARNA GOWRI & SHREE MAHAGANAPATHI POOJA MAHOTSAVA

### PROGRAMME:

| | |
|---|---|
| **Wednesday** | **16.09.2015** |
| 10.00 a.m. | Shree Swarna Gowri Pratishthapana & Pooja |
| 9.00 p.m. | Pooja & Mangalarathi |
| **Thursday** | **17.09.2015** |
| 9.30 a.m. | Shree Mahaganapathi Pratishtapana Pooja |
| 9.00 p.m. | Pooja & Mangalarathi |
| **Friday** | **18.09.2015** |
| 9.00 a.m. | Pooja & Mangalarathi |
| 5.00 p.m. | Arashina Kumkum For Ladies |
| 6.30 p.m. | "Sugama Sangeeta" |
| 9.00 p.m. | Pooja & Mangalarathi |
| **Saturday** | **19.09.2015** |
| 9.00 a.m. | Pooja & Mangalarathi |
| 6.30 p.m. | "Carnatic Vocal" |
| 9.00 p.m. | Pooja & Mangalarathi |
| **Sunday** | **20.09.2015** |
| 9.00 a.m | Pooja & Mangalarathi |
| 10.00 a.m. | Vedga Ghosha by Vaidikas of Shankar Mutt |
| 12.00 noon | Procession of Shri Swarna Gauri & Shri. Ganapathi to Dadar Beach for Immersion Prasada Viniyoga |

## ಅಡುಗೆ ರುಚಿ

### ತಿರಂಗಿ ಢೋಕಳಾ



ಬೇಕಾಗುವ ಸಾಮಗ್ರಿ: ಕಡಲೆ ಹಿಟ್ಟೊ, ಹಸಿಮೆಣಸಿನ ಚೂರು, ಸುಂಠಿಚೂರು, ಉಪ್ಪು, ಸಕ್ಕರೆ, ಎಣ್ಣೆ ನೀರು, ನಿಂಬೆರಸ, ಪಾಲಕ, ಗಜ್ಜರಿ, ಬೀಟರೂರ ಪೇಸ್ಟ್

ವಿಧಾನ: ಮೊದಲು ಒಂದು ಬಾಣಲೆಯಲ್ಲಿ ಕಡಲೆ ಹಿಟ್ಟು, ಉಪ್ಪು, ಸಕ್ಕರೆ, ಎಣ್ಣೆ, ಹಸಿಮೆಣಸಿನ ಚೂರು, ನಿಂಬೆರಸ ಸುಂಠಿ ಚೂರು, ನೀರು ಹಾಕಿ ಒಂದು ಪೇಸ್ಟ್ ಮಾಡಿಕೊಂಡು ಗ್ಯಾಸ್ ಮೇಲ್ಗಡೆ ದೊಡ್ಡ ಬಾಣಲೆಯಲ್ಲಿ ನೀರನ್ನು ಇಟ್ಟು ಒಂದು ತಟ್ಟೆಗೆ ಎಣ್ಣೆ ಹಚ್ಚಿಮಾಡಿದ ಕಡಲೆ ಹಿಟ್ಟೀನ ಮಿಕ್ಸನ್ನು ತಟ್ಟೆಗೆ ಹಾಕಿ ಹಬೆಯ ಮೇಲೆ 10 ನಿಮಿಷ ಬಾಣಲೆ ಮುಚ್ಚಿ ಬೇಯಿಸುವುದು, ನಂತರ ಅದರ ಮೇಲೆ ಹಸಿರು ಪಾಲಕ ಪೇಸ್ಟನ್ನು ಹಾಕಿ ಇನ್ನು ಸ್ವಲ್ಪ ಕಡಲೆಹಿಟ್ಟೀನ ಮಿಕ್ಸನ್ನು ಹಾಕಿ 2–3 ನಿಮಿಷ ಬೇಯಿಸುವುದು. ನಂತರ ಪುನಹ್ ಗಜ್ಜರಿ ಮತ್ತು ಬಿಟರೂಟ ಪೇಸ್ಟನ್ನು ಹಾಕಿ ಬೇಯಿಸುವುದು ನಂತರ ತಣ್ಣಗಾದ ಮೇಲೆ ಒಗ್ಗರಣೆ ಹಾಕಿ ಅಲಂಕಾರ ಮಾಡುವುದು.

### ಉತ್ತರ ಕನ್ನಡ ಸಿಹಿ ದೋಸೆ (ಸುರನೊಳಿ)



ಬೇಕಾಗುವ ಸಾಮಗ್ರಿಗಳು, ಅಕ್ಕಿ, ಮೆಂತ್ಯ, ಬೆಲ್ಲ, ಅವಲಕ್ಕಿ, ಸ್ವಲ್ಪ ಉಪ್ಪು

ವಿಧಾನ: ಮೊದಲ ದಿನ ಅಕ್ಕಿ ಮತ್ತು ಮೆಂತ್ಯವನ್ನು ನೀರಿನಲ್ಲಿ ನೆನೆಸಿ ರಾತ್ರಿ ಅಕ್ಕಿಯನ್ನು ಅರೆದು ಅದರೊಟ್ಟಿಗೆ ಬೆಲ್ಲ, ಉಪ್ಪು, ಸ್ವಲ್ಪ ಅರಸಿನ ವನ್ನು ಹಾಕಿ ನುಣ್ಣಗೆ ಅರೆದು ಮರುದಿನ ಬೆಳಗ್ಗೆ ದೋಸೆಯನ್ನು ಸಣ್ಣ ಉರಿಯಲಿ ಎರಡೂ ಬದಿ ಬೇಯಿಸಿ ಕೊಡುವುದು ಮತ್ತು ಬೆಣ್ಣೆಯೊಟ್ಟಿಗೆ ತಿನ್ನಲು ಬಲು ರುಚಿ.

– ಅರ್ಚನಾ ಕೆಳಕರ್

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938